ಪ್ರಚಾರ ಪುಸ್ತಕ ಮಾಲೆ

255

ಶ್ರೀಪಾದರಾಜರು

ಡಾ. ಟಿ. ಎನ್. ನಾಗರತ್ನ

ಪ್ರಸಾರಾಂಗ ಮೈಸೂರು ವಿಶ್ವವಿದ್ಯಾನಿಲಯ

ಪ್ರಚಾರ ಪುಸ್ತಕಮಾಲೆ–೨೫೫

ಶ್ರೀಪಾದರಾಜರು

ಡಾ. ಟಿ. ಎನ್. ನಾಗರತ್ನ

ಪ್ರಸಾರಾಂಗ ಮೈಸೂರು ವಿಶ್ವವಿದ್ಯಾನಿಲಯ

1987

ಮೊದಲನೆಯ ಮುದ್ರಣ—೧೯೮೭

೫,೦೦೦ ಪ್ರತಿಗಳು

ಬೆಲೆ : ೨೫ ಪೈಸೆ.

ಪ್ರಕಾಶಕರು

ನಿರ್ದೇಶಕರು, ಪ್ರಸಾರಾಂಗ, ಮಾನಸಗಂಗೋತ್ರಿ, ಮೈಸೂರು-6

ಮುದ್ರಕರು

ಮೈಸೂರು ವಿಶ್ವವಿದ್ಯಾನಿಲಯ ಮುದ್ರಣಾಲಯ, ಮೈಸೂರು-6

ಮುನ್ನುಡಿ

ನಮ್ಮ ವಿಶ್ವವಿದ್ಯಾನಿಲಯದ ಮೊದಲನೆಯ ಛಾನ್ಸಲರೂ ಆಳಿದ ಮಹಾಸ್ವಾಮಿಯವರೂ ಆದ ಶ್ರೀ ನಾಲ್ಮಡಿ ಕೃಷ್ಣರಾಜ ಒಡೆಯರ್ ಬಹದ್ದೂರ್ ಅವರು ಮೊದಲನೆಯ 'ಸೆನೆಟ್' ಸಭೆಯ ಪ್ರಾರಂಭೋತ್ಸವ ಸಮಯದಲ್ಲಿಯೂ ಮೊದಲನೆಯ 'ಕಾನ್ವೊಕೇಷನ್' ಸಮಾರಂಭದ ಕಾಲದಲ್ಲಿಯೂ ವಿಶ್ವವಿದ್ಯಾನಿಲಯದ ವಿದ್ಯೆ ಪಟ್ಟಣಗಳಲ್ಲಿ ಮಾತ್ರ ಕೇಂದ್ರೀಕೃತವಾಗದೆ ನಾಡಿನ ಮೂಲೆ ಮೂಲೆಗೂ ಪ್ರಸರಿಸಿ, ಉಚ್ಚಶಿಕ್ಷಣವನ್ನು ಪಡೆಯಲು ಅವಕಾಶ ಹೊಂದದ ಸಾಮಾನ್ಯ ಜನರ ಹೃದಯವನ್ನು ಬೆಳಗಿ ಸಮಷ್ಟಿಪ್ರಜ್ಞೆಯ ವಿಕಾಸಕ್ಕೆ ಕಾರಣವಾಗಬೇಕು ಎಂಬ ಮಹದಾಶಯವನ್ನು ವ್ಯಕ್ತಪಡಿಸಿದ್ದರು. ಅವರ ಆಶಯ ಇಂದು ಫಲದಾಯಕವಾಗುತ್ತಿದೆ. ನಮ್ಮ ವಿಶ್ವವಿದ್ಯಾನಿಲಯದ ಪ್ರಸಾರಾಂಗ ನಾಡಿನ ಮೂಲೆಮೂಲೆಯಲ್ಲಿ ಪ್ರಚಾರೋಪನ್ಯಾಸಗಳನ್ನು ಏರ್ಪಡಿಸಿ, ಸಂಸ್ಕೃತಿ ಪ್ರಸಾರ ಕಾರ್ಯವನ್ನು ಬಹಳ ಸಮರ್ಪಕವಾದ ರೀತಿಯಲ್ಲಿ ನೆರವೇರಿಸುತ್ತಿದೆ.

ಜನರು ಬಯಸಿದೆಡೆಗಳಲ್ಲಿ ಈ ಪ್ರಚಾರೋಪನ್ಯಾಸಗಳನ್ನು ಏರ್ಪಡಿಸಲಾಗುತ್ತಿದೆ. ವಿಶ್ವವಿದ್ಯಾನಿಲಯದಲ್ಲಿ ಅನೇಕ ವರ್ಷಗಳು ಪಾಠ ಹೇಳಿ ಮಿಗಿಲಾದ ಜ್ಞಾನವನ್ನು ಗಳಿಸಿರುವ ಘನ ವಿದ್ವಾಂಸರು ಜನರು ಅಪೇಕ್ಷಿಸುವ ವಿಷಯಗಳನ್ನು ಕುರಿತು ಸರಳವೂ, ಸುಲಭಗ್ರಾಹ್ಯವೂ ಆದ ಕನ್ನಡ ಭಾಷೆಯ ಮೂಲಕ ತಿಳಿವಳಿಕೆ ಕೊಡುತ್ತಾರೆ. ಜ್ಞಾನವನ್ನು ಹಂಚುವುದರಲ್ಲೂ ಆನಂದವಿದೆ. ಅಧ್ಯಾಪಕವೃಂದದವರು ಹಳ್ಳಿಗಳಲ್ಲಿಯೇ ಒಂದೆರಡು ದಿನ ನೆಲಸಿ, ಸಾಮಾನ್ಯಜನರಂತೆಯೇ ಇದ್ದು

ಕೊಂಡು, ಗಳಿಸಿರುವ ಜ್ಞಾನವನ್ನು ಜನಸಾಮಾನ್ಯರ ಹೃದಯ ದಲ್ಲಿ ಬಿತ್ತಿ, ತಾವೂ ಆನಂದವನ್ನು ಅನುಭವಿಸುತ್ತಾರೆ ಮತ್ತು ಇತರರಿಗೂ ಆನಂದವನ್ನುಂಟುಮಾಡುತ್ತಾರೆ. ಈ ಉಪನ್ಯಾಸ ಗಳು ವಿಶ್ವವಿದ್ಯಾನಿಲಯದ ಮೆಟ್ಟಲನ್ನು ಹತ್ತಲು ಅವಕಾಶವಿಲ್ಲ ದವರಿಗೆ ವಿಶ್ವವಿದ್ಯಾನಿಲಯದ ವಿದ್ಯೆಯ ಸೌಲಭ್ಯವನ್ನು ನೀಡಲು ನೆರವಾಗುತ್ತವೆ; ವಿಶ್ವವಿದ್ಯಾನಿಲಯದಲ್ಲಿ ಜ್ಞಾನವನ್ನು ಗಳಿಸಿ ನಾಡಿನ ಬೇರೆ ಬೇರೆ ಭಾಗಗಳಲ್ಲಿ ವಿವಿಧ ಕಾರ್ಯರಂಗಗಳಲ್ಲಿ ನಿರತರಾಗಿರುವ ಜನರಿಗೆ ಮಾರ್ಗದರ್ಶಕವಾಗುತ್ತವೆ; ನಮ್ಮ ಸಮಾಜದಲ್ಲಿನ ಭೇದಭಾವಗಳನ್ನು ಹೋಗಲಾಡಿಸಿ ಸಮಾನತೆ ಯನ್ನು ಸ್ಥಾಪಿಸಲು ಸಹಾಯಕವಾಗುತ್ತವೆ; ವಿಶ್ವವಿದ್ಯಾ ನಿಲಯಕ್ಕೂ ಸಾಮಾನ್ಯ ಜನತೆಗೂ ಮಧ್ಯೆ ಇರುವ ದೊಡ್ಡ ಅಂತರವನ್ನು ಪರಿಹರಿಸಲು ನೆರವಾಗುತ್ತವೆ; ಜನರಲ್ಲಿ ಜ್ಞಾನೋದಯವನ್ನುಂಟುಮಾಡಿ, ದುಃಖಕ್ಕೆ ಮೂಲಕಾರಣ ವಾದ ಅಸಮಾನತೆಯನ್ನು ಹೋಗಲಾಡಿಸಿ, ವಿಶಾಲ ಭಾವನೆ ಮೂಡುವಂತೆ ಮಾಡುತ್ತವೆ.

ಪ್ರಚಾರೋಪನ್ಯಾಸಗಳನ್ನು ಕಿರುಹೊತ್ತಗೆಗಳ ರೂಪದಲ್ಲಿ ಪ್ರಕಟಿಸಲಾಗುತ್ತಿದೆ. ಈ ಉಪನ್ಯಾಸಗಳನ್ನು ಕೇಳಲು ಅವಕಾಶ ಸಿಕ್ಕದವರು ಈ ಹೊತ್ತಗೆಗಳನ್ನು ಕೊಂಡು ಓದಿ ತಿಳಿವಳಿಕೆ ಪಡೆಯಲು ಅವಕಾಶವಿದೆ. ಈ ಮಾಲೆಯ ಪುಸ್ತಕಗಳು ಹೆಚ್ಚು ಜನಪ್ರಿಯವಾಗಿವೆ. ಪುಸ್ತಕಗಳು ಅಚ್ಚಿನ ಮನೆಯಿಂದ ಹೊರ ಬಿದ್ದ ಕೂಡಲೆ ಜನರು ಆದರದಿಂದ ಕೊಂಡು ಓದುತ್ತಾರೆ. ಈ ಮಾಲೆಯಲ್ಲಿ ಈಗಾಗಲೆ ಭೌತವಿಜ್ಞಾನ, ರಸಾಯನ ವಿಜ್ಞಾನ, ಪ್ರಾಣಿವಿಜ್ಞಾನ, ವೈದ್ಯವಿಜ್ಞಾನ, ಗಣಿತವಿಜ್ಞಾನ, ಸಮಾಜ ವಿಜ್ಞಾನ, ಅರ್ಥಶಾಸ್ತ್ರ; ತತ್ತ್ವಶಾಸ್ತ್ರ, ಸಾಹಿತ್ಯ ಮತ್ತು ಕಲೆ

ಮುಂತಾದ ವಿಷಯಗಳನ್ನು ಕುರಿತ ಇನ್ನೂರ ಐವತ್ತನಾಲ್ಕು ಪುಸ್ತಕಗಳು ಪ್ರಕಟವಾಗಿವೆ ಎಂಬುದನ್ನು ತಿಳಿಸಲು ನನಗೆ ಬಹಳ ಸಂತೋಷವಾಗುತ್ತದೆ.

ಈ ಮಾಲೆಯಲ್ಲಿ ಈಗ ಹೊರಬೀಳುತ್ತಿರುವ .ಡಾ ಟಿ. ಎನ್. ನಾಗರತ್ನ ಅವರ 'ಶ್ರೀಪಾದರಾಜರು' ಹೆಚ್ಚು ಜನಪ್ರಿಯ ವಾಗಲೆಂದು ನಾನು ಆಶಿಸುತ್ತೇನೆ.

ವೈ. ಪಿ. ರುದ್ರಪ್ಪ
ಕುಲಪತಿಗಳು

ವಿಷಯಸೂಚಿಕೆ

ಪೀಠಿಕೆ

ನಮಃ ಶ್ರೀಪಾದರಾಜಾಯ ನಮಸ್ತೇ ವ್ಯಾಸಯೋಗಿನೇ
ನಮಃ ಪುರಂದರಾರ್ಯಾಯ ವಿಜಯಾರ್ಯಾಯ ತೇ ನಮಃ

ಈ ಸ್ತುತಿಪದ್ಯದಲ್ಲಿ ಶ್ರೀಪಾದರಾಜರನ್ನು ಮೊದಲು ಹೆಸರಿಸಿರುವುದು ಔಚಿತ್ಯಪೂರ್ಣವಾಗಿದೆ. ವಿಷ್ಣುಭಕ್ತಿಯ ಹರಿಕಾರರಾಗಿ ಬಂದಂತಹ ಶ್ರೀಪಾದರಾಜರನ್ನು ಕರ್ನಾಟಕದ ಹರಿದಾಸ ಪರಂಪರೆಯ ಪ್ರಥಮರೆಂದು, ಆದ್ಯಪ್ರವರ್ತಕರೆಂದು ಕರೆದು ಗೌರವಿಸಲಾಗಿದೆ. ಈ ಮಾತಿಗೆ ಅಭಿಪ್ರಾಯಭೇದವಿರುವುದಾದರೂ ಹರಿದಾಸಸಾಹಿತ್ಯದ ಅಭ್ಯಾಸದಿಂದ ಈ ಮಾತಿನ ಸತ್ಯಾಂಶ ಗೋಚರಿಸುತ್ತದೆ. ಅಚಲಾನಂದದಾಸರು ಹರಿದಾಸ ಪರಂಪರೆಗೆ ಮೊದಲಿಗರೆಂದು ಕೆಲವರೂ, ನರಹರಿತೀರ್ಥರು ಪ್ರಥಮರೆಂದು ಹಲವರೂ ಅಭಿಪ್ರಾಯಪಟ್ಟಿರುವುದನ್ನು ಹೇಳಿ, ಡಾ. ವರದರಾಜರಾಯರು, ಸಾಕಷ್ಟು ಪ್ರಮಾಣಗಳೊಂದಿಗೆ ಶ್ರೀಪಾದರಾಜರ ಆದ್ಯತೆಯನ್ನು ಸ್ಥಿರೀಕರಿಸಿರುವರು [1]

ಸಾಕಷ್ಟು ಕಾಲ ತಮ್ಮ ದೀಕ್ಷಾಗುರುಗಳೊಡನೆ ಶ್ರೀರಂಗದಲ್ಲಿ ನೆಲಸಿದ್ದ ಶ್ರೀಪಾದರಾಜರಿಗೆ ಅಲ್ಲಿನ ಆಳ್ವಾರರು ತಾಯ್ನುಡಿಯಲ್ಲಿ ಹಾಡಿದ್ದ ಭಕ್ತಿಗೀತೆಗಳ ಪರಿಣಾಮದ ಅರಿವಿತ್ತು. ಹಾಗೂ ಹನ್ನೆರಡನೆಯ ಶತಮಾನದಲ್ಲೇ ಕನ್ನಡ ನಾಡಿನಲ್ಲಿ ಶಿವಶರಣರಿಂದಾದ ಧರ್ಮಜಾಗ್ರತಿಯ ಪ್ರತ್ಯಕ್ಷ ಪ್ರಮಾಣವಿತ್ತು. ಹೀಗಾಗಿ ಅವರ ಭಕ್ತಿಕೈಂಕರ್ಯ ಮಾತೃಭಾಷೆಯಲ್ಲೇ ಆರಂಭ

---

1 'ಶ್ರೀಪಾದರಾಜರ ಕೃತಿಗಳು', ಕನ್ನಡ ಅಧ್ಯಯನ ಸಂಸ್ಥೆ, ಪು xix–xx (ಪೀಠಿಕೆ), ೧೯೭೩.

ವಾಗಿ ಕನ್ನಡದ ಚಿಕ್ಕ ಚಿಕ್ಕ ಕೀರ್ತನೆಗಳ ರಚನೆಗೆ ನಾಂದಿಯಾಯಿತು. ಮಠಾಧಿಪತಿಗಳಾಗಿದ್ದ ಶ್ರೀಪಾದರಾಜರು ತಮ್ಮ ಪೂಜಾಕಾಲದಲ್ಲಿ ಈ ಕನ್ನಡ ಹಾಡುಗಳನ್ನು ಹಾಡಿ ಭಗವಂತನಿಗೆ ತಮ್ಮ ಗಾಯನ ಸೇವೆಯನ್ನು ಸಲ್ಲಿಸುತ್ತಿದ್ದಂತೆ ತಿಳಿದುಬರುತ್ತದೆ. ಇವರ ಅನಂತರ ವ್ಯಾಸರಾಯರು, ಪುರಂದರ ಕನಕರಾದಿಯಾಗಿ ಇವರ ಶಿಷ್ಯರ ಒಂದು ತಂಡವೇ ಭಕ್ತಿಕೈಂಕರ್ಯಕ್ಕೆ ಸಿದ್ಧವಾಯಿತು. ಅವರೆಲ್ಲರಿಗೂ ಶ್ರೀಪಾದರಾಜರ ಕನ್ನಡ ರಚನೆಗಳೇ —ಉಗಾಭೋಗ, ಸುಳಾದಿ, ವೃತ್ತನಾಮ, ಕೀರ್ತನೆ ಇತ್ಯಾದಿ— ಮಾದರಿಯಾದುವು. ಹೀಗೆ ರಚನೆಗಳ ದೃಷ್ಟಿಯಿಂದ ಶ್ರೀಪಾದರಾಜರಲ್ಲಿ ಬರುವ ಭಕ್ತಿವೈವಿಧ್ಯ, ಭಾವವೈವಿಧ್ಯಗಳು ಒಟ್ಟು ಹರಿದಾಸಸಾಹಿತ್ಯದ ವೈವಿಧ್ಯಗಳೇ ಆಗಿ ಪರಿಣಮಿಸಿವೆ. ಈ ಎಲ್ಲ ದೃಷ್ಟಿಗಳಿಂದ ಶ್ರೀಪಾದರಾಜರು ಹರಿದಾಸ ಸಾಹಿತ್ಯದ ಆದ್ಯರು ಎಂಬುದನ್ನು ಒಪ್ಪಿಕೊಳ್ಳಬಹುದು.

ಜೀವನ ವಿಚಾರ

ದಾಸರ ವೈಯಕ್ತಿಕ ಜೀವನದ ಬಗ್ಗೆ ಹೆಚ್ಚು ಮಾಹಿತಿಗಳು ದೊರೆಯುವುದಿಲ್ಲ. ಅವರ ಸಮಕಾಲೀನರೂ ಶಿಷ್ಯರೂ ಆದ ಶ್ರೀ ವ್ಯಾಸರಾಯರು ರಚಿಸಿರುವ ಕನ್ನಡ ಕೀರ್ತನೆಗಳು ಮತ್ತು ಸಂಸ್ಕೃತದ ಪಂಚಮಾಲಾಸ್ತುತಿ; ವಿಜಯದಾಸರ ಒಂದು ಸುಳಾದಿ; ಶ್ರೀನಿಧಿತೀರ್ಥರ 'ಶ್ರೀಪಾದರಾಜಾಷ್ಟಕಂ'; ಭೀಮಾಚಾರ್ಯ ವಿರಚಿತ 'ಶ್ರೀ ಪೂರ್ಣಬೋಧ ಗುರುವಂಶ ಕಲ್ಪತರು'—ಈ ಕೆಲವು ಆಕರಗಳಲ್ಲಿ ಶ್ರೀಪಾದರಾಜರ ಬಗ್ಗೆ ಕೆಲವು ಮಾಹಿತಿಗಳು ದೊರೆಯುತ್ತವೆ. ಅವೂ ಅವರು ಯತ್ಯಾಶ್ರಮವನ್ನು ಕೈಕೊಂಡ ಅನಂತರದ ಮಹಿಮೆಗಳು ಎಂದರೆ

ಸೂಕ್ತವಾದೀತು. ಈ ಕೆಲವು ಅಂಶಗಳನ್ನು ಮನಸ್ಸಿನಲ್ಲಿಟ್ಟು ಕೊಂಡು, ಪರಂಪರಾಗತವಾಗಿ ಅವರ ಬಗ್ಗೆ ಬೆಳೆದು ಉಳಿದಿರುವ ಪ್ರತೀತಿಗಳ ಸಹಾಯದಿಂದ ಶ್ರೀಪಾದರಾಜರ ಜೀವನವಿಚಾರ ವನ್ನು ಈ ರೀತಿ ಕ್ರೋಢೀಕರಿಸಬಹುದು. ತಂದೆ ಶೇಷಗಿರಿ ಆಚಾರ್ಯ, ತಾಯಿ ಗಿರಿಯಮ್ಮ. ಈ ದಂಪತಿಗಳಿಗೆ ಹಿರಿಯ ಮಗನಾದ ಇವರ ಮೊದಲ ಹೆಸರು ಲಕ್ಷ್ಮೀನಾರಾಯಣ. (ಲಕ್ಷ್ಮೀನಾರಾಯಣನ ಬಾಲ್ಯ, ವಿದ್ಯಾಭ್ಯಾಸಗಳ ಬಗ್ಗೆ ನಿಖರ ವಾಗಿ ಏನೂ ತಿಳಿಯುವುದಿಲ್ಲ.) 'ಬ್ರಹ್ಮಣ್ಯತೀರ್ಥ ವಿಜಯ' ದಲ್ಲಿರುವ ಹೇಳಿಕೆಯಂತೆ ಬ್ರಹ್ಮಣ್ಯತೀರ್ಥರು ಹಾಗೂ ಶ್ರೀಪಾದರಾಜರು ಅಕ್ಕತಂಗಿಯರ ಮಕ್ಕಳು ಹಾಗೂ ಇಬ್ಬರೂ ಸಮಾನಾಸಕ್ತರು. ಹಾಗಾಗಿ ಕಣ್ವಾನದಿಯ ದಡದಲ್ಲಿರುವ ಬ್ರಹ್ಮಣ್ಯತೀರ್ಥರ ವೃಂದಾವನವಿರುವ ಅಬ್ಬೂರಿನಲ್ಲಿ ಶ್ರೀಪಾದ ರಾಜರು ತಮ್ಮ ಬಾಲ್ಯವನ್ನು ಕಳೆದಿರುವ ಸಾಧ್ಯತೆಯಿದೆ. ಅಲ್ಲಿ ನೆಲೆಸಿದ್ದ ಶ್ರೀ ಪುರುಷೋತ್ತಮತೀರ್ಥರೇ ಶ್ರೀಪಾದರಾಜರ ದೊಡ್ಡಮ್ಮನ ಮಕ್ಕಳಾದ ಬ್ರಹ್ಮಣ್ಯತೀರ್ಥರಿಗೂ ಯತ್ಯಾಶ್ರಮ ವನ್ನು ಕೊಟ್ಟವರು

ಒಮ್ಮೆ, ಶ್ರೀ ಮಾಧ್ವಾಚಾರ್ಯರ ನೇರಶಿಷ್ಯರಾದ ಪದ್ಮನಾಭ ತೀರ್ಥರ ಮಠದ ಪೀಳಿಗೆಯಲ್ಲಿ ಏಳನೆಯವರಾದ ಶ್ರೀ ಸ್ವರ್ಣವರ್ಣ ತೀರ್ಥರು ಶ್ರೀರಂಗಪಟ್ಟಣದ ಬಳಿ ಕಾವೇರೀ ಸ್ನಾನಕ್ಕೆ ಬಂದರು. ಹಾಗೆಯೇ ಅಬ್ಬೂರಿನ ಶ್ರೀ ಪುರುಷೋತ್ತಮತೀರ್ಥರ ದರ್ಶನಾರ್ಥವಾಗಿ ಅವರಲ್ಲಿಗೆ ಬಂದ ಸ್ವರ್ಣವರ್ಣರು ಅವರೊಂದಿ ಗಿದ್ದ ಬಾಲಸನ್ಯಾಸಿ ಬ್ರಹ್ಮಣ್ಯತೀರ್ಥರನ್ನು ನೋಡಿ ತಮಗೂ ಅಂತಹ ಒಬ್ಬ ವರ್ಚಸ್ವೀ ಬಾಲಕ ಶಿಷ್ಯನಾಗಬೇಕೆಂದು ಬಯಸಿ ದರು. ಅವರ ಇಂಗಿತವನ್ನರಿತ ಪುರುಷೋತ್ತಮತೀರ್ಥರು

ಶೇಷಗಿರಿ-ಗಿರಿಯಮ್ಮ ದಂಪತಿಗಳಿಗೆ ಅವರ ಮಗ ಲಕ್ಷ್ಮೀನಾರಾಯಣನನ್ನು ತಮ್ಮ ಬಳಿಗೆ ಕರೆತರಬೇಕೆಂದು ಸಂದೇಶವನ್ನು ಕಳುಹಿಸಿದರು; ತಂದೆ ತಾಯಿಗಳನ್ನು ಒಪ್ಪಿಸಿ, ಲಕ್ಷ್ಮೀನಾರಾಯಣನನ್ನು ಸ್ವರ್ಣವರ್ಣತೀರ್ಥರಿಗೆ ಶಿಷ್ಯನನ್ನಾಗಿ ಒಪ್ಪಿಸಿದರು ಬಳಿಕ ಸ್ವರ್ಣವರ್ಣರು ತಮ್ಮ ಶಿಷ್ಯ ಲಕ್ಷ್ಮೀನಾರಾಯಣನೊಂದಿಗೆ ಶ್ರೀರಂಗಕ್ಕೆ ತೆರಳಿದರು. ಲಕ್ಷ್ಮೀನಾರಾಯಣನ ವಿದ್ಯಾಭ್ಯಾಸದ ಹೊಣೆ ಹೊತ್ತ ಸ್ವರ್ಣವರ್ಣರು ಅವನಿಗೆ ಬ್ರಹ್ಮೋಪದೇಶವನ್ನು ಮಾಡಿ, ವಿದ್ಯಾವಂತನನ್ನಾಗಿ ಮಾಡಿದರು. ಅನಂತರ ಸಂನ್ಯಾಸ ದೀಕ್ಷೆಯನ್ನೂ ಕೊಟ್ಟು ತಮ್ಮ ಸಂಸ್ಥಾನದ ಉತ್ತರಾಧಿಕಾರಿಯೆಂದು ನಿರ್ಧರಿಸಿದರು. ಹೀಗೆ ಬಾಲಕ ಲಕ್ಷ್ಮೀನಾರಾಯಣ 'ಲಕ್ಷ್ಮೀನಾರಾಯಣತೀರ್ಥ'ರಾದರು. ಅವರ ವಿದ್ಯಾಭ್ಯಾಸ ಶ್ರೀವಿಬುಧೇಂದ್ರತೀರ್ಥರಲ್ಲಿ ಮುಂದುವರಿದಂತೆ ತಿಳಿದುಬರುತ್ತದೆ. ಅವರಿಂದ ದ್ವೈತಸಿದ್ಧಾಂತವೆಲ್ಲವನ್ನೂ ಕಲಿತುಕೊಂಡರು. ಒಮ್ಮೆ ಲಕ್ಷ್ಮೀನಾರಾಯಣತೀರ್ಥರು ತಮ್ಮ ಗುರುಗಳಾದ ವಿಬುಧೇಂದ್ರರೊಂದಿಗೆ ರಾಯಚೂರು ಜಿಲ್ಲೆಯ ಕೊಪ್ಪದಲ್ಲಿ ನಡೆದ ವಿದ್ವತ್ಸಭೆಯಲ್ಲಿ ಭಾಗವಹಿಸಬೇಕಾಗಿ ಬಂತು. ಸಭೆಯಲ್ಲಿ ಲಕ್ಷ್ಮೀನಾರಾಯಣತೀರ್ಥರು ಟೀಕಾಚಾರ್ಯರ ಸುಧಾಗ್ರಂಥವನ್ನು ಓದಿ, ವಿದ್ವತ್ಪೂರ್ಣವಾಗಿ ವ್ಯಾಖ್ಯಾನಿಸಿದರು. ತೀಕ್ಷ್ಣಮತಿಗಳಾಗಿದ್ದ ಲಕ್ಷ್ಮೀನಾರಾಯಣತೀರ್ಥರ ವಿದ್ವತ್ತನ್ನು ಕಂಡು ಮೆಚ್ಚಿದ ಅಂದಿನ ಉತ್ತರಾದಿಮಠದ ರಘುನಾಥತೀರ್ಥರು (೧೪೪೪-೧೫೦೨) ಅವರನ್ನು 'ಶ್ರೀಪಾದರಾಜ'ರೆಂದು ಕರೆದು ಆಶೀರ್ವದಿಸಿದರು. ಈ ಘಟನೆಯ ಬಗ್ಗೆ ಭೀಮಾಚಾರ್ಯ ವಿರಚಿತ 'ಶ್ರೀ ಪೂರ್ಣಬೋಧ ಗುರುವಂಶ ಕಲ್ಪತರು' ಎಂಬ ಗ್ರಂಥದಲ್ಲಿ ಉಲ್ಲೇಖವಿದೆ. '....ಶ್ರೀಪಾದಾ ಏವಭೋ ವಯಮ್ ಯೂಯಂ

ಶ್ರೀಪಾದರಾಜಾಸ್ತು ಪಾಂಡಿತ್ಯಾತಿಶಯಾನ್ವಿತಾಃ'. ಅಂದಿನಿಂದ ಲಕ್ಷ್ಮೀನಾರಾಯಣತೀರ್ಥರ ಹೆಸರು ಶ್ರೀಪಾದರಾಜರೆಂದು ಪ್ರಸಿದ್ಧವಾಯಿತು. ಮುಂದೆ ಇವರ ಸಂಸ್ಥಾನಕ್ಕೂ ಶ್ರೀಪಾದ ರಾಜರ ಮಠವೆಂದೇ ಹೆಸರಾದುದನ್ನು ಇಲ್ಲಿ ನೆನೆಯಬಹುದು.

ವಿದ್ಯಾಭ್ಯಾಸವನ್ನು ಮುಗಿಸಿಕೊಂಡು, –ಶ್ರೀಪಾದರಾಜರಾಗಿ —ಮರಳಿ ಶ್ರೀರಂಗಕ್ಕೆ ಬಂದ ಶ್ರೀಪಾದರಾಜರು ಸ್ವರ್ಣವರ್ಣ ತೀರ್ಥರು ವೃಂದಾವನಸ್ಥರಾದ ಬಳಿಕ ತಾವೇ ಸಂಸ್ಥಾನವನ್ನು ವಹಿಸಿಕೊಂಡರು. ಮಧ್ವಾಚಾರ್ಯರು ಸಂಸ್ಥಾನಕ್ಕೆ ಕೊಟ್ಟಿದ್ದ ಶ್ರೀ ಗೋಪೀನಾಥಮೂರ್ತಿಯನ್ನು ಪೂಜಿಸುತ್ತಾ, ದ್ವೈತ ಮತ ತತ್ತ್ವಗಳನ್ನು ಪ್ರಚಾರಮಾಡುತ್ತಾ ಸಂಚಾರ ಹೊರಟವರು ಮುಳಬಾಗಿಲಿಗೆ ಬಂದರು. ನೃಸಿಂಹತೀರ್ಥದ ಸನ್ನಿಧಿಯೂ ಯೋಗಾನರಸಿಂಹನ ಕ್ಷೇತ್ರವೂ ಆಗಿದ್ದ ಮುಳಬಾಗಿಲಿನ ಪ್ರಶಾಂತತೆಗೆ ಮಾರುಹೋಗಿ ಅಲ್ಲಿಯೇ ತಮ್ಮ ಮಠವನ್ನು ಸ್ಥಾಪಿಸಿ, ನೆಲೆಯಾಗಿನಿಂತರು. 'ರಂಗವಿಠಲ' ಅಂಕಿತದಲ್ಲಿ ಚಿಕ್ಕ ಚಿಕ್ಕ ಕನ್ನಡ ಕೀರ್ತನೆಗಳನ್ನು ರಚಿಸಿ ಪೂಜಾಕಾಲದಲ್ಲಿ ತಾವೂ ಹಾಡಿ, ಶಿಷ್ಯರಿಂದಲೂ ಹಾಡಿಸುತ್ತಿದ್ದರು. ಶ್ರೀಪಾದ ರಾಜರು ಕೀರ್ತನೆಗಳನ್ನು ರಚಿಸಿದ ಪ್ರಾರಂಭದಲ್ಲಿ ತಮ್ಮ ಸಂಸ್ಥಾನದ ಆರಾಧ್ಯದೈವವಾದ 'ಗೋಪೀನಾಥ'ನ ಅಂಕಿತದಲ್ಲಿ ಕೃತಿಗಳನ್ನು ರಚಿಸಿದರು; ಪಂಢರಾಪುರದಲ್ಲಿ ಸಂಪುಟವೊಂದು ದೊರೆತು ಅದರಲ್ಲಿ ರಂಗವಿಠಲನ ದರ್ಶನವಾದ ಬಳಿಕ ರಂಗ ವಿಠಲಾಂಕಿತದಲ್ಲೇ ಬರೆಯಲು ಪ್ರಾರಂಭಿಸಿದರು ಎಂಬ ಮಾತಿದೆ.[1] ಆದರೆ ಸದ್ಯಕ್ಕೆ ಶ್ರೀಪಾದರಾಜರ ಕೃತಿಗಳ ವಿಚಾರದಲ್ಲಿ ಅಧಿಕೃತ

1 ಬೇಲೂರು ಕೇಶವದಾಸರ 'ಕರ್ಣಾಟಕ ಭಕ್ತವಿಜಯ', ೧೯೩೩, ಭಾಗ ೧, ಪು, ೧೧೮.

ವೆಂದು ಭಾವಿಸಬಹುದಾದ, ಮೈಸೂರು ವಿಶ್ವವಿದ್ಯಾನಿಲಯದವರು ಸಂಪಾದಿಸಿ ಪ್ರಕಟಿಸಿರುವ 'ಶ್ರೀಪಾದರಾಜರ ಕೃತಿಗಳ'ಲ್ಲಿ[1] 'ಗೋಪೀನಾಥ' ಅಂಕಿತದ ಒಂದೇ ಒಂದು ಕೀರ್ತನೆಯೂ ಇಲ್ಲ. ಕನ್ನಡದ ಈ ಕೀರ್ತನಕೈಂಕರ್ಯ ಕ್ರಮೇಣ ವೃದ್ಧಿಯಾಯಿತು. ದಿನಕಳೆದಂತೆ ಬೆಳೆಯತೊಡಗಿದ ಆ ಸಂಸ್ಥಾನ ದ್ವೈತಸಿದ್ಧಾಂತದ ಪ್ರಮುಖ ಕೇಂದ್ರವೆನ್ನಿಸಿಕೊಂಡು ಶ್ರೀ ವ್ಯಾಸರಾಯರೇ ಮೊದಲಾದ ಪ್ರಮುಖರನ್ನು ಆಕರ್ಷಿಸಿತು. ಶ್ರೀಪಾದರಾಜರ ಸೋದರ ಬ್ರಹ್ಮಣ್ಯತೀರ್ಥರ ಶಿಷ್ಯರಾಗಿದ್ದ ವ್ಯಾಸರಾಯರು ಮುಳುಬಾಗಿಲಿಗೆ ಬಂದು ಶ್ರೀಪಾದರಾಜರ ಶಿಷ್ಯರಾಗಿ ನಿಂತರು. ಮುಂದೆ ವ್ಯಾಸರಾಯರು ಪುರಂದರ ಕನಕರಂತಹ ಹರಿದಾಸಶ್ರೇಷ್ಠರಿಗೆ ಗುರುಗಳಾಗಿ ದಾಸಕೂಟ[2] – ವ್ಯಾಸಕೂಟ[3]ಗಳಿಗೆ ಸೇತುವೆಯಾಗಿ ಪರಿಣಮಿಸಿದರು.

ವ್ಯಾಸರಾಯರು ತಮ್ಮ ಗುರುಗಳಾದ ಶ್ರೀಪಾದರಾಜರನ್ನು ಕುರಿತು ಎರಡು ಕನ್ನಡ ಕೀರ್ತನೆಗಳನ್ನೂ, ಸಂಸ್ಕೃತದಲ್ಲಿ 'ಶ್ರೀಪಾದರಾಜ ಪಂಚರತ್ನಮಾಲಿಕೆ'ಯನ್ನೂ ರಚಿಸಿದ್ದಾರೆ. ಇವು ಶ್ರೀಪಾದರಾಜರನ್ನು ಕುರಿತು ನಮಗೆ ಸಿಗುವ ಸಮಕಾಲೀನ ಅಧಿಕೃತ ದಾಖಲೆಗಳು :

ಮಹಿಮೆ ಸಾಲದೆ, ಇಷ್ಟೇ ಮಹಿಮೆ ಸಾಲದೆ ಪ.

---

1 ಸಂ. ಡಾ. ಜಿ. ವರದರಾಜರಾವ್.

2 ಕನ್ನಡ ಭಾಷೆಯಲ್ಲಿ ಕೀರ್ತನೆಗಳ ಮೂಲಕ ಮಧ್ವಮತತತ್ತ್ವ ಪ್ರಚಾರ ಮಾಡುತ್ತಿದ್ದ ಹರಿದಾಸರ ಗುಂಪು.

3 ಸಂಸ್ಕೃತದಲ್ಲಿ ಮಧ್ವಮತತತ್ತ್ವ ಪ್ರಚಾರ ಮಾಡುತ್ತಿದ್ದ ಮಠಾಧಿಪತಿಗಳ ಗುಂಪು.

ಅಹಿಶಯನನ ಒಲುಮೆಯಿಂದ
ಮಹಿಯೊಳೊಮ್ಮೆ ಶ್ರೀಪಾದರಾಯರ ಅ.ಪ.

ಮುತ್ತಿನ ಕವಚ ಮೇಲ್ಕುಲಾವಿ
ರತ್ನ ಕೆತ್ತಿದ ಕರ್ಣಕುಂಡಲ
ಕಸ್ತೂರಿ ತಿಲಕ ಶ್ರೀಗಂಧ ಲೇಪನ
ವಿಸ್ತಾರದಿಂದ ಮೆರೆದು ಬರುವ ೧

ವಿಪ್ರಹತ್ಯದೋಷ ಬರಲು
ಕ್ಷಿಪ್ರ ಶಂಖೋದಕದಿ ಕಳೆಯೆ
ಅಪ್ರಬುದ್ಧರು ದೂಷಿಸೆ ಗೇರೆಣ್ಣೆ
ಕಪ್ಪು ವಸನವ ಶುಭ್ರಮಾಡಿದ ೨

ಹರಿಗೆ ಸಮರ್ಪಿಸಿದ ನಾನಾ
ಪರಿಯ ಶಾಕಗಳನು ಭುಂಜಿಸೆ
ನರರು ನಗಲು ಶ್ರೀಕೃಷ್ಣನ
ಕರುಣದಿಂದ ಹಸಿಯು ತೋರಿದ ೩

—ಸುಖ ಪ್ರಾರಬ್ಧಿಗಳೆಂದು ಹೆಸರಾಗಿರುವ ಶ್ರೀಪಾದರಾಜರ ಮುತ್ತಿನ ಕುಲಾವಿ, ಕಿರೀಟ, ರತ್ನಖಚಿತ ಕರ್ಣಕುಂಡಲಾದಿ ವೇಷಭೂಷಣಗಳನ್ನು ಕಂಡು ಆಡಿಕೊಂಡ ಕುಹಕಿಗಳಿಗೆ ರಾಜರು ಉತ್ತರಿಸಿದ ರೀತಿಯನ್ನು ವ್ಯಾಸರಾಯರು ಹೀಗೆ ಹೇಳಿದ್ದಾರೆ. ಬ್ರಹ್ಮಹತ್ಯಾದೋಷವನ್ನು ಶಂಖೋದಕದಿಂದ ಹೋಗಲಾಡಿಸಿದ ಪ್ರಸಂಗ ಅಂದಿನ ವಿಜಯನಗರದ ರಾಜ ಪ್ರತಿನಿಧಿಯಾಗಿದ್ದ ಸಾಳುವ ನರಸಿಂಹನ ಕಿವಿಗೂ ಬಿತ್ತು. ಅವ್ಯವಹಾರಿಯಾಗಿದ್ದ ತಿರುಪತಿ ದೇವಸ್ಥಾನದ ಅರ್ಚಕನನ್ನೂ, ಅವನ ಸಂತತಿಯನ್ನೂ ಕೊಂದು ಬ್ರಹ್ಮಹತ್ಯಾಪಾಪವೊದಗಿತೆಂದು ಚಿಂತಿಸುತ್ತಿದ್ದ ಸಾಳುವ ನರಸಿಂಹನು ಶ್ರೀಪಾದರಾಜರನ್ನು ಕರೆಸಿ ಅವರೆದುರಿನಲ್ಲಿ ತನ್ನ ಅಳಲನ್ನು ತೋಡಿಕೊಂಡನು. ಶ್ರೀಗಳು ಅವನಿಗೆ ಧರ್ಮಸೂಕ್ಷ್ಮ

ಗಳಿಂದ ಸಮಾಧಾನ ಹೇಳಿದರು. ಪ್ರೀತಿಯಾಗಿ ಶ್ರೀಗಳವರನ್ನು ಗೌರವಿಸಿದ ಸಾಳುವ ನರಸಿಂಹನು ಅವರನ್ನು ಚಂದ್ರಗಿರಿಯ ಸಿಂಹಾಸನದ ಮೇಲೆ ಕೂಡಿಸಿ, ಕನಕಾಭಿಷೇಕ ಮಾಡಿದನು. ಶ್ರೀಪಾದರಾಜರ ಮಠದ ಯತಿಪರಂಪರೆಗೆ ಸೇರಿದ ಶ್ರೀಸಿಧಿ ತೀರ್ಥರು ತಮ್ಮ 'ಶ್ರೀಪಾದರಾಜಾಷ್ಟಕ'ದಲ್ಲಿ ಆ ಘಟನೆಯನ್ನು ಹೀಗೆ ಹೇಳಿದ್ದಾರೆ :

ಶ್ರೀಮದ್ವೀರ ನೃಸಿಂಹ ನಾಮ ನೃಪತೇರ್ಭೂದೇವ ಹತ್ಯಾವ್ಯಥಾಂ
ದೂರೀಕೃತ್ಯತದರ್ಪಿತೋಜ್ವಲ ಮಹಾಸಿಂಹಾಸನೇ ಸಂಸ್ಥಿತಃ

ಇನ್ನೊಂದು ಕೀರ್ತನೆಯಲ್ಲಿ ವ್ಯಾಸರಾಯರು :

ವಾದಿಗಜ ಮಸ್ತಕಾಂಕುಶ ಸುಜನ ಬಾಧಗೇಯ
ಮೇದಿನೀ ಸುರ ವಂದ್ಯ ಶ್ರೀಪಾದರಾಯ ಪ.

ಸಕಲ ಶಾಸ್ತ್ರಕಲಾಪ ಸಂನ್ಯಾಸ ಕುಲದೀಪ
ಸಕಲ ಸತ್ಯಸ್ಥಾಪ ಸುಜ್ಞಾನದೀಪ
ಪ್ರಕಟ ಪಾವನರೂಪ ಅರಿಕುಜನಮತಲೋಪ
ನಿಕಟ ವರ್ಜಿತ ಪಾಪ ಕೀರ್ತಿಪ್ರತಾಪ ೧

ಹರಿಪದಾಂಬುಜಭೃಂಗ ಪರಮತಾಹಿ ವಿಹಂಗ
ಪರಮಸುಗುಣಾಂತರಂಗ ಭವದುರಿತಭಂಗ
ಶರಣಕೀರ್ತಿತರಂಗ ಶತ್ರುತಿಮಿರಪತಂಗ
ಶರಣು ಶುಭಚರಿತಾಂಗ ಷಟ್ಶಾಸ್ತ್ರಸಂಗ ೨

ಸಿರಿಕೃಷ್ಣದಿವ್ಯಪಾದಾಬ್ಜಚಿಂತಾಲೋಲ
ವರ ಹೇಮವರ್ಣ ಮುನಿಪತಿಯ ಸುಕುಮಾರ
ಗುರುತಿಲಕ ಶ್ರೀಪಾದರಾಯ ಅಮಿತೋದ್ಧಾರ
ಶರಣಜನ ಸುರಧೇನು ಭಕ್ತಮಂದಾರ ೩

—ಹೀಗೆ ಗುರುಗಳನ್ನು ಕೊಂಡಾಡುತ್ತಾ ಅವರ ವಿದ್ವತ್ತು, ಕೀರ್ತಿ, ಭಕ್ತಿಗಳನ್ನು ಶ್ಲಾಘಿಸಿದ್ದಾರೆ. ಇಲ್ಲಿ ಶ್ರೀಪಾದರಾಜರನ್ನು

'ಹೇವ ವರ್ಣಮುನಿಪತಿಯು ಸುಕುಮಾರ' ಎಂದು ಸಂಬೋಧಿಸಿರುವುದು ಗವನಾರ್ಹ. ತಮ್ಮ ಪಂಚರತ್ನಮಾಲಿಕೆಯಲ್ಲಿ ಶ್ರೀಪಾದರಾಜರನ್ನು ರುಚಿತವುಹೃದಯರೆಂದೂ, ವಾದಿಗಳಲ್ಲಿ ಅಜೇಯರೆಂದೂ, ಷಷ್ಟಿಶಾಖಭುಂಜಕರೆಂದೂ, ಸೌಖ್ಯದಾಯಕರೆಂದೂ ವರ್ಣಿಸಿದ್ದಾರೆ. ಗುರುಗಳನ್ನು ಶಿಷ್ಯರು ಹೀಗೆ ಕೊಂಡಾಡಿದರೆ ಗುರುಗಳು ಶಿಷ್ಯರಾದ ವ್ಯಾಸರಾಯರನ್ನು:

ಇದಿರದಾವನು ನಿನಗೀ ಧರೆಯೊಳು
ಪದುಮನಾಭನ ದಾಸ ಪರಮೋಲ್ಲಾಸ ಪ.
ವಾದಿತಿಮಿರ ಮಾರ್ತಾಂಡನೆಂದೆನಿಸಿದ
ವಾದಿಶರಭ ಭೇರುಂಡ ವ್ಯಾಸರಾಯಾ

ಎಂದು ಮುಂತಾಗಿ ವ್ಯಾಸರಾಯರನ್ನು ಮೆಚ್ಚಿ ಹೊಗಳಿದ್ದಾರೆ. ಕೆರೆ, ಬಾವಿ, ಪುರ, ಅಗ್ರಹಾರಗಳನ್ನು ಕಟ್ಟಿಸಿ ಲಕ್ಷಾಂತರ ಬ್ರಾಹ್ಮಣ ಕುಟುಂಬಗಳಿಗೆ ಆಸರೆಯಾಗಿ ನಿಂತ, ಬ್ರಹ್ಮಣ್ಯತೀರ್ಥರ ಶಿಷ್ಯರಾದ ವ್ಯಾಸರಾಯರನ್ನು ಕೊಂಡಾಡುವುದು ಮನುಷ್ಯಮಾತ್ರರಿಂದ ಸಾಧ್ಯವಿಲ್ಲ; 'ಸಾಸಿರ ಜಿಹ್ವೆಗಳುಳ್ಳ ಶೇಷನೇ ಕೊಂಡಾಡಬೇಕು'—ಎನ್ನುವರು.

ಶ್ರೀಪಾದರಾಜರು ನೃಸಿಂಹತೀರ್ಥದ ಈಶಾನ್ಯಭಾಗದಲ್ಲಿ ಗಂಗೆಯನ್ನು ಹರಿಸಿದರೆಂಬುದೂ, ವ್ಯಾಸರಾಯರನ್ನು ನುಂಗುತ್ತಿದ್ದ ಸರ್ಪದೊಡನೆ ಮಾತನಾಡಿ ಅವರ ಆಪತ್ತನ್ನು ಪರಿಹರಿಸಿದರೆಂಬುದೂ, ಒಮ್ಮೆ ಅರಣ್ಯದಲ್ಲಿರುವಾಗ ಅರುವತ್ತುನಾಲ್ಕು ಬಗೆಯ ಪದಾರ್ಥಗಳಿಂದ ಶ್ರೀಹರಿಗೆ ನೈವೇದ್ಯ ಮಾಡಿದರೆಂಬುದೂ ಅವರ ಶಿಷ್ಯಪರಂಪರೆಯ, ಭಕ್ತರ ನಂಬಿಕೆ. ಈ ಪ್ರಸಂಗಗಳ ಸತ್ಯಾಸತ್ಯತೆಗಳೇನೇ ಇರಲಿ, ಜನರು ಶ್ರೀಪಾದರಾಜರನ್ನು

ಮಹಿಮಾವಂತರೆಂದು ತಿಳಿದು ಗೌರವಿಸಿದ್ದು ಸ್ಪಷ್ಟ. ವಿಜಯ ದಾಸರು ಶ್ರೀಪಾದರಾಜರನ್ನು ಕುರಿತು ತಮ್ಮ ಒಂದು ಸುಳಾದಿ ಯಲ್ಲಿ ಹೀಗೆ ಹೇಳಿರುವರು :

ಇವರ ಪ್ರಸಾದವಾದರೆ ವ್ಯಾಸಮುನಿರಾಯ
ಕವಿರಾಯ ಪುರಂದರದಾಸರು ಮಿಗಿಲಾ
ದವರ ಕರುಣವಿನ್ನು ಸಿದ್ಧಿಸುವುದು ಕೇಳಿ
ನವಭಕುತಿ ಪುಟ್ಟುವುದು ವ್ಯಕ್ತವಾಗಿ
ತವಕದಿಂದಲಿ ಚರಮದೇಹವೆ ಬರುವುದು
ದಿವಿಜರು ಒಲಿದು ಸತ್ಕರ್ಮ ಮಾಡಿಸುವರು
ಕವಿನುತ ನಮ್ಮ ವಿಜಯವಿಠಲರೇಯ
ದಿವಾರಾತ್ರಿಗಳಲಿ ಅವರ ಕೂಡ್ಯಾಡುವ

ಹೀಗೆಯೇ ವಾದಿರಾಜರು ಇವರನ್ನು 'ಮಾಯಾವಾದಿಗಳ ಕುಟ್ಟಿ ಮೆರೆದ ದಿಟ್ಟ'ನೆಂದು ಹೊಗಳಿದರೆ ಗುರುಮಧ್ವಪತಿ ವಿಠಲರು ತಮ್ಮ ಒಂದು ಉಗಾಭೋಗದಲ್ಲಿ 'ವರಧ್ರುವನವತಾರ ಶ್ರೀಪಾದರಾಯರು ಸಿರಿರಂಗವಿಠಲನ ಉಪಾಸಕರು'—ಎಂದು ಸ್ತುತಿಸಿರುವರು.

ಹೀಗೆ, ಕ್ರಿ. ಶ. ಸು. ೧೪೦೪ರಲ್ಲಿ ಚನ್ನಪಟ್ಟಣದ ಅಬ್ಬೂರಿನಲ್ಲಿ ಜನಿಸಿದ ಲಕ್ಷ್ಮೀನಾರಾಯಣ ಶ್ರೀರಂಗದಲ್ಲಿ ಸ್ವರ್ಣವರ್ಣತೀರ್ಥ ರಿಂದ ಸಂನ್ಯಾಸವನ್ನು ಪಡೆದು ಲಕ್ಷ್ಮೀನಾರಾಯಣತೀರ್ಥರಾಗಿ, ರಘುನಾಥತೀರ್ಥರಿಂದ 'ಶ್ರೀಪಾದರಾಜ'ರೆಂಬ ಅಭಿದಾನವನ್ನು ಪಡೆದು ೯೮ ವರ್ಷಗಳ ತುಂಬುಬಾಳನ್ನು ಬಾಳಿದರು. ಸು. ೧೫೦೨ರಲ್ಲಿ, ಜ್ಯೇಷ್ಠ ಶುದ್ಧ ಚತುರ್ದಶಿಯಂದು ತಮ್ಮ ಇಹಲೋಕ ವ್ಯಾಪಾರವನ್ನು ಮುಗಿಸಿ ಬೃಂದಾವನಸ್ಥರಾದರು. ಅವರ ಬೃಂದಾವನವು ಕೋಲಾರ ಜಿಲ್ಲೆಯ ಮುಳುಬಾಗಿಲಿಗೆ ಒಂದೂವರೆ

ವೈಲಿ ದೂರದಲ್ಲಿರುವ ನೃಸಿಂಹತೀರ್ಥದ ಬಳಿಯಿದೆ. ಕೇವಲ ಆರುವರ್ಷ ವಯಸ್ಸಿನಲ್ಲೇ ಸಂನ್ಯಾಸಾಶ್ರಮವನ್ನು ಸ್ವೀಕರಿಸಿ, ಮಠದ ಅಧಿಕಾರವನ್ನು ವಹಿಸಿಕೊಂಡು ಸುಸೂತ್ರವಾಗಿ ನಿರ್ವಹಿಸಿದರು. ಶ್ರೀಪಾದರಾಜರ ಅನಂತರ ಪದ್ಮನಾಭತೀರ್ಥರ ಪೀಳಿಗೆಯ ಆ ಮಠಕ್ಕೆ 'ಶ್ರೀಪಾದರಾಜರ ಮಠ'ವೆಂದೇ ಹೆಸರಾಯಿತು. 'ಮುಳುಬಾಗಿಲು ಮಠ'ವೆಂದೂ ಅದನ್ನು ಕರೆಯುವುದುಂಟು.

ಕೃತಿಗಳು

ಶ್ರೀಪಾದರಾಜರು ಸಂಸ್ಕೃತ ಮತ್ತು ಕನ್ನಡ ಭಾಷೆಗಳೆರಡನ್ನೂ, ಚೆನ್ನಾಗಿ ಬಲ್ಲವರಾಗಿದ್ದರು. 'ರಂಗವಿಠಲ' ಅಂಕಿತದಲ್ಲಿ, ಕನ್ನಡದಲ್ಲಿ ಕೀರ್ತನೆ, ಸುಳಾದಿ, ಉಗಾಭೋಗ, ವೃತ್ತನಾಮ ದಂಡಕಗಳನ್ನು ರಚಿಸಿರುವರು. ಇದುವರೆಗೆ ಇವರ ೮೧ ಕೀರ್ತನೆಗಳು, ೩ ಸುಳಾದಿಗಳು, ೧೫ ಉಗಾಭೋಗಗಳು, ೧ ವೃತ್ತನಾಮ, ೧ ದಂಡಕ ಉಪಲಬ್ಧವಿದೆ. ಇವರು ಸಂಸ್ಕೃತದಲ್ಲಿ 'ವಾಗ್ವಜ್ರ' ವೆಂಬ ವ್ಯಾಖ್ಯಾನ ಗ್ರಂಥವನ್ನು ರಚಿಸಿರುವುದಾಗಿ ತಿಳಿದು ಬರುತ್ತದೆ. ಈ ಗ್ರಂಥವು ಇದುವರೆಗೆ ಸಮಗ್ರವಾಗಿ ಮುದ್ರಣವಾಗಿಲ್ಲ. ಶ್ರೀಪಾದರಾಜ ಮಠದಿಂದ ಮುದ್ರಿತವಾಗಿರುವ ಶ್ರೀಪಾದರಾಜ ಚರಿತಾಮೃತದಲ್ಲಿ ಅದರ ಒಂದು ಭಾಗವನ್ನು ಮಾತ್ರ ಉಲ್ಲೇಖಿಸಿದೆ. ಈಗ ಶ್ರೀಪಾದರಾಜರ ರಚನೆಗಳ ಪ್ರಭೇದಗಳನ್ನು ಒಂದೊಂದಾಗಿ ಪರಿಚಯಿಸಿಕೊಳ್ಳೋಣ:

ಕೀರ್ತನೆ: ಪಲ್ಲವಿ, ಅನುಪಲ್ಲವಿ, ನುಡಿ—ಈ ಮೂರು ಘಟಕಗಳಿಂದ ಕೂಡಿರುವ ಹಾಡು. ಪಲ್ಲವಿಯಲ್ಲಿ ಸಾಮಾನ್ಯವಾಗಿ ದಾಸರು ತಾವು ಕಂಡುಕೊಂಡಂತಹ ಸತ್ಯದ ಪ್ರತಿಪಾದನೆ

ಮಾಡಿರುತ್ತಾರೆ. ಅನುಪಲ್ಲವಿಯಲ್ಲಿ ಆ ಭಾವ ಮುಂದುವರಿದು ಕ್ರಮವಾಗಿ ನುಡಿಗಳಿಂದ ಪೋಷಿತವಾಗಿರುತ್ತದೆ. ಅಂದರೆ ಕೀರ್ತನೆಯ ಸಾರವೇ ಪಲ್ಲವಿಯಾಗಿರುತ್ತದೆ. ಎಲ್ಲ ಕೀರ್ತನೆಯ ಕೊನೆಯನುಡಿಯ ಕೊನೆಯಸಾಲಿನಲ್ಲಿ ಆಯಾ ರಚನಕಾರರ ಅಂಕಿತವಿರುತ್ತದೆ. ನುಡಿಗಳು ಹೆಚ್ಚಾಗಿ ನಾಲ್ಕು ಸಾಲಿನವು. ಮೂರು, ಐದು, ಏಳು–ಹೀಗೆ ನುಡಿಗಳು ಬೆಸಸಂಖ್ಯೆಯಲ್ಲಿರುತ್ತವೆ. ಹತ್ತಾರು ನುಡಿಗಳಿರುವ ದೀರ್ಘವಾದ ಕೀರ್ತನೆಗಳಿದ್ದರೂ ೩ರಿಂದ ೫ ನುಡಿಗಳುಳ್ಳ ಕೀರ್ತನೆಗಳೇ ಹೆಚ್ಚು. ಶ್ರೀಪಾದರಾಜರ ಒಂದು ಕೀರ್ತನೆಯ ಸ್ವರೂಪವಿದು :

ಕಂಗಳಿದ್ಯಾತಕೊ ಕಾವೇರಿ ರಂಗನ ನೋಡದ ಪ.

ಜಗಂಗಳೊಳಗೆ ಮಂಗಳ ಮೂರುತಿ
ರಂಗನ ಶ್ರೀಪಾದಂಗಳ ನೋಡದ ಅ. ಪ.

ಎಂದಿಗಾದರೊಮ್ಮೆ ಜನರು
ಬಂದು ಭೂಮಿಯಲ್ಲಿ ನಿಂದು
ಚಂದ್ರಪುಷ್ಕರಿಣಿ ಸ್ನಾನವ ಮಾಡಿ ಆ
ನಂದದಿಂದಲಿ ರಂಗನ ನೋಡದ ೧

ಹರಿ ಪಾದೋದಕಸಮ ಕಾವೇರಿ
ವಿರಜಾನದಿ ಸ್ನಾನವ ಮಾಡಿ
ಪರಮವೈಕುಂಠ ರಂಗಮಂದಿರ
ಪರ ವಾಸುದೇವನ ನೋಡದ ೨

ಹಾರಹೀರ ವೈಜಯಂತಿ
ತೋರ ಮುತ್ತಿನ ಸರವ ಧರಿಸಿ
ತೇರನೇರಿ ಬೀದಿಲಿ
ಮೆರೆವ ರಂಗವಿಠಲನ ನೋಡದ ೩

೨೨ ನುಡಿಗಳಲ್ಲಿರುವ 'ಮಧ್ವನಾಮ'ವೇ ಶ್ರೀಪಾದರಾಜರ ಕೀರ್ತನೆಗಳಲ್ಲಿ ದೊಡ್ಡದು. ಅವರ ಎಲ್ಲ ಕೀರ್ತನೆಗಳ ಕೊನೆಯ ಸಾಲಿನಲ್ಲೂ 'ರಂಗವಿಠಲ' ಅಂಕಿತವಿರುತ್ತದೆ.

ಸುಳಾದಿ: ಸುಳಾದಿ ಹರಿದಾಸರ ಇನ್ನೊಂದು ವಿಶಿಷ್ಟ ಗೇಯ ರಚನೆ. ತಾಳಪ್ರಧಾನವಾದ ರಚನೆಗಳಿವು. ಪಾದಗಳಲ್ಲಿ ನಿಯತವಾದ ಸಂಖ್ಯಾನಿಯಮವಿರುವುದಿಲ್ಲ. ಒಂದೊಂದು ನುಡಿ ಒಂದೊಂದು ತಾಳದಲ್ಲಿದ್ದು ಪ್ರತಿ ತಾಳದ ಕೊನೆಯಲ್ಲೂ ಕರ್ತೃವಿನ ಅಂಕಿತವಿರುತ್ತದೆ. ಸಾಮಾನ್ಯವಾಗಿ ಸುಳಾದಿ ೫ ಅಥವಾ ಏಳು ತಾಳಗಳಲ್ಲಿರುತ್ತದೆ–ಧ್ರುವ, ಮಠ್ಯ, ರೂಪಕ, ಝಂಪೆ, ತ್ರಿಪುಟ, ಅಟ್ಟ ಮತ್ತು ಏಕತಾಳ. ಇವುಗಳನ್ನು 'ಸುಳಾದಿ ಸಪ್ತತಾಳ'ಗಳೆಂದೇ ಕರೆಯುವುದು ರೂಢಿ. ಈ ಏಳರೊಂದಿಗೆ ಆದಿತಾಳವೂ ಬರುವುದುಂಟು. ಕೆಲವು ಸುಳಾದಿಗಳು ೫ ತಾಳಗಳಲ್ಲಿರುವುದೂ ಕಂಡುಬಂದಿದೆ. ಸುಳಾದಿಯ ಕೊನೆಗೆ ಅಂಕಿತದಿಂದ ಕೂಡಿದ ಎರಡು ಸಾಲಿನ ಒಂದು 'ಜತೆ' ಬರುತ್ತದೆ. ಕೀರ್ತನೆಯ ಸಾರ ಸಾಮಾನ್ಯವಾಗಿ ಪಲ್ಲವಿಯಲ್ಲಿರುವಂತೆ ಸುಳಾದಿಯ ಸಾರ 'ಜತೆ'ಯಲ್ಲಿರುತ್ತದೆ. ಕೀರ್ತನೆಗಿಂತ ಬಿಗಿಯಾದ ಬಂಧ ಸುಳಾದಿ. ತತ್ವಪ್ರಧಾನವಾದ ರಚನೆಗಳು. 'ಕನ್ನಡ ದಾಸಸಾಹಿತ್ಯದ ವಿನಾ ಈ ಜಾತಿ ಬೇರೆಲ್ಲಿಯೂ ಕಂಡುಬರುವುದಿಲ್ಲ'[1] ವೆಂಬ ಮಾತಿದೆ. ಆದ್ದರಿಂದ ನಮಗೆ ತಿಳಿದಂತೆ ಶ್ರೀಪಾದರಾಜರೇ ಅಧಿಕೃತವಾಗಿ ಮೊದಲ ಸುಳಾದಿ ರಚನಕಾರರು. ಅವರ ಒಂದು ಸುಳಾದಿ ಹೀಗಿದೆ:

---

1 ಕರ್ನಾಟಕ ಸಂಗೀತವೂ ದಾಸಕೂಟವೂ

—ಹುಲಗೂರು ಕೃಷ್ಣಾಚಾರ್ಯ

ಧ್ರುವತಾಳ

ನಿನ್ನಾಧೀನ ಶರೀರ ಕರಣ ಚೇಷ್ಟೆಗಳೆಲ್ಲ
ನಿನ್ನಾಧೀನ ಬಂಧಮೋಕ್ಷ ನಿರಯಗಳು
ನಿನ್ನಾಧೀನ ಯೋಗ್ಯತೆ ಸಾಧನ ಸಾಧ್ಯಗಳೆಲ್ಲ
ನಿನ್ನಾಧೀನ ಸುಕೃತ ದುಷ್ಕೃತ ಫಲವು
ನಿನ್ನಾಧೀನ ವಿಷಯಾತ್ಮ ಬುದ್ಧಿಗಳೆಲ್ಲ
ನಿನ್ನಾಧೀನ ಚರಾಚರವೆಂದು ಶ್ರುತಿ ಸಾರುತಲಿವೆ
ಇಂತು ಪುಣ್ಯಪಾಪವೆಲ್ಲ ನಿನ್ನ ಲೇಪಿತವೋ ದೇವ
ಎಂತು ಜೀವರನು ಪುಣ್ಯ ಪಾಪಂಗಳನುಣಿಸುವೆ
ಅಂತರಾತ್ಮನೆ ನಿನ್ನ ಮಹಿಮೆಗೆ ನಮೋ ಎಂಬೆ
ಎಂತೋ ಚಿತ್ತವಿನ್ನೆಂತೋ ಪಾಲಿಸೋ ರಂಗವಿಠಲ ೧

ಮಠ್ಯತಾಳ

ಮುನ್ನ ನಿನ್ನ ಚರಣಕಮಲವ ನಂಬಿದೆ
ಭವಭವಂಗಳಲಿ ಬಂದೆನೋ
ಪನ್ನಗೇಶ ಶಯನ ಶ್ರೀಹರೇ
ಇನ್ನು ಬಿಡೆನೊ ಬಿಡೆನಯ್ಯಾ ಸಂಪನ್ನ
ಎನ್ನ ಗುಣದೋಷವರಸದೆ
ಇನ್ನು ಕಾಯೋ ರಂಗವಿಠಲ ೨

ರೂಪಕತಾಳ

ಕರಣಗಳು ಬಿಡದೆ ತಮ್ಮ ತಮ್ಮ
ವಿಷಯಂಗಳಿಗೆ ಎಳೆವುತಲಿವೆ
ಎನ್ನ ಹರಣ ನಿನ್ನದು ಕರುಣಾಕರನೇ
ಈ ಧರೆ ರವಣ ಮಾಣಿಸೋ ಹರಿಯೇ
ನಿನ್ನ ಚರಣಭಕುತರ ಶರಣಾದೆನು
ಹೊರೆವುದು ಎನ್ನ ರಂಗವಿಠಲರೇಯ ೩

ಅಟ್ಟತಾಳ

ಬಂದು ಬಂದು ನಾನಾ ಭವದಲ್ಲಿ ಬೆಂದೆನಯ್ಯ
ನಂದನಂದನ ಇಂದಿರಾನಂದ
ಕುಂದ ಶುದ್ಧ ಧವಳದಂತೆ ಮಂದಹಾಸ
ನಂದನ ಕಂದ ಇಂದಿರಾನಂದ
ಇಂದೆನ್ನ ಸಲಹಯ್ಯ ರಂಗವಿಠಲ ೪

ಏಕತಾಳ

ಹರಿಯೇ ನಿನ್ನ ಒಮ್ಮೆ ನೆನೆದವ
ನರಕವ ಹೊಗನಂತೆ
ಆನು ಒಮ್ಮೆ ಇಮ್ಮೆ ನೆನೆವೆನಯ್ಯ
ಆನು ನಿನ್ನ ನಂಬಿದೆ ಕರುಣೆಗಳರಸ
ಹೊರೆದೆನ್ನ ಕಾಯೋ ರಂಗವಿಠಲ ೫

ಜತೆ

ಮಂಗಳಮಹಿಮ ಭುಜಂಗಶಯನ ನಮೋ
ಜಂಗುಳಿದೈವದ ಗಂಡ ರಂಗವಿಠಲ ೬

ಉಗಾಭೋಗ : ಇದೂ ಹರಿದಾಸರು ಬಳಸಿಕೊಂಡಿರುವ ಒಂದು ಗೇಯಪ್ರಕಾರ. ಸಂಗೀತ ಪ್ರಧಾನವಾದ ರಚನೆ. ಯಾವುದೇ ಒಂದು ರಾಗದ ಅಥವಾ ತಾಳದ ಕಟ್ಟಿಗೆ ಒಳಪಡದ, ಸರಳವಾದ ಬಂಧ. ಪಾದಗಳ ಸಂಖ್ಯಾನಿಯಮವಿಲ್ಲ. ರಚನೆಯ ಕೊನೆಯಲ್ಲಿ ಆಯಾ ರಚನಕಾರರ ಅಂಕಿತವಿರುತ್ತದೆ. ಮೇಲ್ನೋಟಕ್ಕೆ ವಚನಗಳನ್ನು ಹೋಲುತ್ತದೆಯಾದರೂ ಮೂಲಭೂತವಾಗಿ ಇದೊಂದು ಗೇಯರಚನೆ. ನುಡಿಗಳ ತಡೆಯಿಲ್ಲ. ಉಗಾಭೋಗ, ರಾಗ-ತಾಳ ಪ್ರಧಾನವಾದ ಕೀರ್ತನೆ, ತಾಳ ಪ್ರಧಾನವಾದ

ಸುಳಾದಿಗಳಿಗಿಂತ ಲಘುವಾದ, ಘನೀಭೂತವಾದ ಭಾವನೆಗಳ ಅಭಿವ್ಯಕ್ತಿಯಾಗಿದೆ.

ಶ್ರೀಹರಿಯ ಮಹಿಮೆ, ದಾಸರ ಆತ್ಮವೃತ್ತಾಂತ, ಡಂಭಾಚಾರ ಖಂಡನೆ ಇವೇ ಉಗಾಭೋಗದ ವಸ್ತುಗಳು. ಶ್ರೀಪಾದರಾಜರ ಒಂದು ಉಗಾಭೋಗ ಹೀಗಿದೆ:

ಧ್ಯಾನವು ಕೃತಯುಗದಿ
ಯಜನ ಯಜ್ಞವು ತ್ರೇತಾಯುಗದಿ
ದಾನವಾಂತಕನ ದೇವತಾರ್ಚನೆಗೆ ದ್ವಾಪರಯುಗದಿ
ಆ ಮಾನವರಿಗೆಷ್ಟು ಫಲವೋ ಅಷ್ಟು ಫಲವು
ಕಲಿಯುಗದಿ ಗಾನದಲಿ ಕೇಶವಯೆನಲು
ಕೈಗೊಡುವನು ರಂಗವಿಠಲ

ಈ ಮೂರು ಪ್ರಮುಖ ಬಂಧಗಳೇ ಅಲ್ಲದೆ ಒಂದು ಪದ ಒಂದು ಶ್ಲೋಕದಂತೆ ಮುಂದುವರಿಯುವ 'ವೃತ್ತನಾಮ'ವನ್ನೂ ಶ್ರೀಪಾದರಾಜರು ರಚಿಸಿರುವರು. [ಮಾನನಿಧಿ ಶ್ರೀ ಕೃಷ್ಣ ಮಧುರೆ ಗೈದುವನಂತೆ । ಏನು ಪಥವಮ್ಮ ನಮಗೆ]* ದಾಸ ಸಾಹಿತ್ಯದಲ್ಲಿ ಕ್ವಚಿತ್ತಾಗಿ ಈ ಪ್ರಕಾರ ಕಂಡು ಬರುತ್ತದೆ. 'ದಂಡಕ' ಎಂಬ ಪ್ರಕಾರವನ್ನು ರಚಿಸಿರುವ ಏಕೈಕ ಹರಿದಾಸರು ಶ್ರೀಪಾದರಾಜರು. ಅವರ 'ಲಕ್ಷ್ಮೀನೃಸಿಂಹ ಪ್ರಾದುರ್ಭಾವ ದಂಡಕ' ೫ ಮಾತ್ರೆಯ ಗಣಗಳಿಂದ ಕೂಡಿದ್ದು, ಮೇಲ್ನೋಟಕ್ಕೆ ಸರಳರಗಳೆಯನ್ನು ಹೋಲುತ್ತದೆ. ಇವುಗಳ ವಸ್ತು, ವೈಶಿಷ್ಟ್ಯ ಗಳನ್ನು ಮುಂದೆ ನೋಡೋಣ.

---

* ಶ್ರೀಪಾದರಾಜರ ಕೃತಿಗಳು, ಪುಟ. ೧೧೩

ಶ್ರೀಪಾದರಾಜರ ಈ ಎಲ್ಲ ರೀತಿಯ ರಚನೆಗಳನ್ನೂ ಒಟ್ಟಾಗಿ ಪರಿಭಾವಿಸಿ ಅಭ್ಯಾಸದ ಅನುಕೂಲದೃಷ್ಟಿಯಿಂದ ನಾಲ್ಕು ಮುಖ್ಯ ಭಾಗಗಳನ್ನಾಗಿ ಮಾಡಿಕೊಳ್ಳಬಹುದು.

(೧) ಆತ್ಮಶೋಧನೆಯ ರಚನೆಗಳು

(೨) ದೈವಭಕ್ತಿ ನಿರೂಪಣೆಯ ರಚನೆಗಳು

(೩) ದ್ವೈತ ತತ್ತ್ವಪ್ರತಿಪಾದಕ ರಚನೆಗಳು ಮತ್ತು

(೪) ನೀತಿಬೋಧಕ ರಚನೆಗಳು

ಭಕ್ತ ಚೇತನವೊಂದು ಭಗವಂತನ ಸಾನ್ನಿಧ್ಯಕ್ಕಾಗಿ ಹಲುಬಿ ಹಂಬಲಿಸುವ ಪರಿಯನ್ನು ಶ್ರೀಪಾದರಾಜರ ಆತ್ಮಶೋಧನೆಯ ಕೃತಿಗಳಲ್ಲಿ ಕಾಣಬಹುದು. ಭಕ್ತನಾದವನು ಮೊದಲು ತನ್ನ ಅಂತರಂಗವನ್ನೆಲ್ಲ ಭಗವಂತನೆದುರಿನಲ್ಲಿ ತೋಡಿಕೊಂಡು ಪಶ್ಚಾತ್ತಾಪದ ಮೂಸೆಯಲ್ಲಿ ಶುದ್ಧನಾಗಿ ಅನಂತರ ಲೋಕವ್ಯವಹಾರವನ್ನು ತಿದ್ದುವ ಯೋಗ್ಯತೆಯನ್ನು ಗಳಿಸಿಕೊಳ್ಳುತ್ತಾನೆ. ಭಕ್ತಿ ಪಂಥದ ಎಲ್ಲ ಸಂತರಲ್ಲೂ ನಾವು ಈ ಮನಸ್ಥಿತಿಯನ್ನು ಕಾಣುತ್ತೇವೆ. ತಾವು ವ್ಯರ್ಥವಾಗಿ ಕಳೆದ ದಿನಗಳ ನೆನಪೇ ಅವರನ್ನು ಕಾಡತೊಡಗುತ್ತದೆ. ಶ್ರೀಪಾದರಾಜರೂ ಇದಕ್ಕೆ ಹೊರತಲ್ಲ :

ಅನ್ನಂತಕಾಲದಲ್ಲಿ ನಿನ್ನ ನಾನರಿಯದೆ ಭವಗಳಲ್ಲಿ ಬಂದೆನೊ
ಅನ್ನಂತಕಾಲದಲ್ಲಿ ನಿನ್ನವನೆನಿಸದೆ ಮೂರುಖನಾದೆನೊ
ಅನ್ನಂತಕಾಲದಲ್ಲಿ ನಿನ್ನ ಚರಣರತಿಯಿಲ್ಲದೆ ನೊಂದೆನೊ

—ಎಂದು ಅಲವತ್ತುಕೊಳ್ಳುತ್ತಾರೆ. 'ಚಿತ್ತ ಜನಯ್ಯನ ಚಿಂತಿಸು ಮನವೇ' ಎಂದು ತಮ್ಮ ಮನಸ್ಸಿಗೇ ಉಪದೇಶ

ಮಾಡುವರು. ಮನಸ್ಸಿನ ಚಂಚಲಬುದ್ಧಿಯನ್ನು ಶಬ್ದಗಳಲ್ಲಿ ಸಮರ್ಥವಾಗಿ ಸೆರೆಹಿಡಿದಿದ್ದಾರೆ.

ಕಂಡಕಂಡ ಕಡೆಗೆ ಪೋಪ ಚಂಚಲ ಮನವು
ಪಿಂಡ ತಿಂಬಲ್ಲಿ ಬಹುನಿಷ್ಠ ತಾನು
ಭಂಡಾಟದವನೆಂದು ಬಯಲಿಗೆ ತಾರದೆ
ಕೊಂಡಾಡುವಂತೆ ಭಕುತಿಯ ಕೊಟ್ಟು ಸಲಹಯ್ಯ

ಆ ಚಂಚಲ ಮನಸ್ಸನ್ನು ಹಿಡಿದು ನಿಲ್ಲಿಸಿ ಭಕುತಿಯನ್ನು ಕೊಟ್ಟು ಸಲಹಬೇಕೆಂಬುದೇ ಶ್ರೀಪಾದರಾಜರ ಕಳಕಳಿಯ ಪ್ರಾರ್ಥನೆ. ಹೀಗೆ ಪಶ್ಚಾತ್ತಾಪದಿಂದ ಪರಿಶುದ್ಧವಾದ ಅವರ ಮನಸ್ಸು ಹರಿ ಭಕ್ತಿಯ ಆಲಂಬನೆಯಿಂದ ನಿರಾಳವಾಗುತ್ತದೆ. 'ನಿನ್ನ ನಂಬಿದ ಮ್ಯಾಲೆ ಇನ್ನು ಭಯವ್ಯಾತಕೆ ಪನ್ನಗಾಧಿಶಯನ', 'ಸರಕು ಒಪ್ಪಿಸಿದಮ್ಯಾಲೆ ಸುಂಕವುಂಟೆ ದೇವ'–ಎಂದು ತಮ್ಮ ಸಮಸ್ತವನ್ನೂ ಹರಿಗೆ ಒಪ್ಪಿಸಿದ ಬಳಿಕ ಅವನು ತಮ್ಮನ್ನು ಕಾಪಾಡಲೇಬೇಕೆಂದು ವಾದಿಸುತ್ತಾರೆ. ಹೀಗೆ ಒಂದು ಹದಕ್ಕೆ ಬಂದ ಮನಸ್ಸು ನಾನಾ ಭಾವಗಳಿಂದ ಹರಿಯನ್ನು ಆರಾಧಿಸ ತೊಡಗುತ್ತದೆ

ಭಕ್ತನ ದೈವಭಕ್ತಿನಿರೂಪಣೆಯಲ್ಲಿ ಸಾಮಾನ್ಯವಾಗಿ ಭಾಗವತ ಸಪ್ತಮಸ್ಕಂಧದಲ್ಲಿ ಉಕ್ತವಾಗಿರುವ ನವವಿಧ ಭಕ್ತಿ ಮಾರ್ಗವನ್ನು ಕಾಣುತ್ತೇವೆ. ಹರಿದಾಸರಿಗಂತೂ ಅದೇ ರಾಜ ಮಾರ್ಗ:

ಶ್ರವಣಂ ಕೀರ್ತನಂ ವಿಷ್ಣೋಃ ಸ್ಮರಣಂ ಪಾದಸೇವನಂ
ಅರ್ಚನಂ ವಂದನಂ ದಾಸ್ಯಂ ಸಖ್ಯಮಾತ್ಮನಿವೇದನಂ

—ಶ್ರವಣಭಕ್ತಿ, ಕೀರ್ತನಭಕ್ತಿ, ಸ್ಮರಣಭಕ್ತಿ, ಪಾದಸೇವನ ಭಕ್ತಿ, ಅರ್ಚನಭಕ್ತಿ, ವಂದನಭಕ್ತಿ, ದಾಸ್ಯಭಕ್ತಿ, ಸಖ್ಯಭಕ್ತಿ, ಆತ್ಮ ನಿವೇದನಭಕ್ತಿ—ಇವೇ ಆ ಒಂಬತ್ತು ವಿಧಗಳು. ಈ ಎಲ್ಲ ಭಕ್ತಿಯ ವಿಧಗಳನ್ನೂ ಸೂಕ್ಷ್ಮವಾಗಿ ಪರಿಶೀಲಿಸಿದಾಗ ಒಂದರಿಂದ ಇನ್ನೊಂದಕ್ಕೆ ಒಂದು ರೀತಿಯ ಭಾವದ ಬೆಳವಣಿಗೆ ಯನ್ನು ಕಾಣುತ್ತೇವೆ. ಹರಿಯ ಸಂಬಂಧವಾದ ಪುರಾಣ ಪುಣ್ಯ ಕತೆಗಳನ್ನು ಮತ್ತೆ ಮತ್ತೆ ಕೇಳಿದಾಗ ಭಕ್ತ ತಾನೂ ಹಾಡಲಾ ರಂಭಿಸಬಹುದು. ದೇವನನ್ನು ಕಾಣಬೇಕೆನ್ನಿಸಿ, ಅವನನ್ನು ಸೇವಿ ಸುವ ಹಂಬಲ ಬರಬಹುದು. ಮನುಷ್ಯನ ಮನಃಸ್ಥಿತಿಯಲ್ಲಿ ಇದು ತೀರ ಸಹಜವಾದ ವ್ಯಾಪಾರ. ಕೊನೆಗೆ ಅವನ ಬಯಕೆ ಎಲ್ಲಿಗೆ ಬರುತ್ತದೆಂದರೆ ಆ ಸರ್ವಶಕ್ತನಾದ ಶ್ರೀಹರಿಯ ಎದುರಿನಲ್ಲಿ ತಾನು ಏನೂ ಅಲ್ಲ ಎನ್ನಿಸಿ ಸಂಪೂರ್ಣವಾಗಿ ತನ್ನನ್ನೇ ಅವನಿಗೆ ನಿವೇದಿಸಿಕೊಂಡು ಬಿಡುತ್ತಾನೆ. ಪ್ರತಿಯೊಬ್ಬ ಭಕ್ತನ ಭಕ್ತಿ ಸಾಧನೆಯಲ್ಲಿಯೂ ಈ ಕೆಲವು ಹಂತಗಳು ಅನಿವಾರ್ಯ. ಅಂತೆಯೇ ಶ್ರೀಪಾದರಾಜರ ಕೀರ್ತನೆಗಳಲ್ಲೂ ಭಕ್ತಿಯ ಈ ವೈವಿಧ್ಯ ಹಾಸುಹೊಕ್ಕಾಗಿದೆ. ಆದರೆ ಹರಿದಾಸರ ಕೃತಿಗಳನ್ನು ಅಭ್ಯಾಸಮಾಡುವಾಗ ಈ ಮೇಲಿನ ಒಂಬತ್ತು ರೀತಿಯ ಭಕ್ತಿ ಗಳಲ್ಲಿ ನಾಲ್ಕಾರು ವಿಧಗಳು ಒಂದೇ ಕೀರ್ತನೆಯಲ್ಲಿ ಅಡಕ ವಾಗಿದ್ದು, ಆ ಕೀರ್ತನೆಯ ಸಾಹಿತ್ಯದ ಒಟ್ಟಂದವನ್ನು ಸವಿಯಲು ತೊಡಕಾಗುತ್ತದೆ. ಆದ್ದರಿಂದ ಭಕ್ತಿ ಸಾಹಿತ್ಯವನ್ನು ಭಾವಗಳಿ ಗನುಗುಣವಾಗಿ-ದಾಸ್ಯ, ಸಖ್ಯ, ಮಧುರ, ವಾತ್ಸಲ್ಯ ಹಾಗೂ ಶಾಂತ ಭಾವಗಳೆಂಬ–ಪಂಚಭಾವಗಳಲ್ಲಿ ವಿಭಾಗಿಸಿ ಅಭ್ಯಸಿಸು ವುದು ರೂಢಿ. ಉದಾಹರಣೆಗೆ ಶ್ರವಣ, ಕೀರ್ತನ, ಅರ್ಚನ, ವಂದನ, ಪಾದಸೇವನಭಕ್ತಿಗಳನ್ನು ಭಕ್ತ, ದಾಸ್ಯ ಸಖ್ಯ ಮಧುರ

ವಾತ್ಸಲ್ಯ ಶಾಂತ ಈ ಯಾವ ಒಂದು ಭಾವನೆಯಿಂದಲಾದರೂ ಸಾಧನೆ ಮಾಡಬಹುದು. ಈ ಸೌಲಭ್ಯದಿಂದಾಗಿ ನವವಿಧ ಭಕ್ತಿಗಳಿಗಿಂತ ಪಂಚವಿಧ ಭಾವಗಳ ವಿಂಗಡಣೆ ಹೆಚ್ಚು ಗ್ರಾಹ್ಯ. ಈ ವಿಂಗಡಣೆ ಕೇವಲ ಅಭ್ಯಾಸದ ಅನುಕೂಲಕ್ಕಾಗಿ ಮಾತ್ರ.

ಹರಿಯನ್ನು ಒಡೆಯ, ಗೆಳೆಯ, ಇನಿಯ, ಎಳೆಯ ಎಂದು ಭಾವಿಸಿ ಆರಾಧಿಸುವುದು ಮತ್ತು ಈ ಸಂಬಂಧಗಳ ವಲಯದಿಂದ ದೂರ ನಿಂತು ಕೇವಲ ಭಕ್ತನಾಗಿ ಆರಾಧಿಸುವುದು–ಎಂದು ಸ್ಥೂಲ ವಾಗಿ ಪಂಚಭಾವಗಳನ್ನು ಅರ್ಥೈಸಬಹುದು.

ಭಕ್ತ ತನ್ನನ್ನು ಭಗವಂತನ ಆಳು, ಸೇವಕ, ದಾಸ ಎಂದು ಭಾವಿಸಿಕೊಂಡು ಭಗವಂತನನ್ನು ತನ್ನ ಒಡೆಯ, ಸ್ವಾಮಿ, ದೊರೆ ಎಂದು ಭಾವಿಸಿ ಭಕ್ತಿಸಾಧನೆ ಮಾಡುವುದೇ ದಾಸ್ಯಭಾವ. ಉಳಿದ ಭಾವಗಳಿಗಿಂತ ಈ ಭಾವಕ್ಕೆ ದಾಸಸಾಹಿತ್ಯದಲ್ಲಿ ಪ್ರಾಶಸ್ತ್ಯ ಹೆಚ್ಚು. ಆದ್ದರಿಂದಲೇ ಅವರು ತಮ್ಮನ್ನು ಹರಿದಾಸ ರೆಂದು ಕರೆದುಕೊಂಡಿರುವುದು. ಹರಿಯ ದಾಸರಾಗುವುದಕ್ಕಿಂತಲೂ ಅವನ ದಾಸರ ದಾಸ್ಯ ಅವರಿಗೆ ಪ್ರಿಯ. ಅಂತೆಯೇ ಶ್ರೀಪಾದ ರಾಜರು :

ಇದನಾದರು ಕೊಡದಿದ್ದರೆ ನಿನ್ನ
ಪದಕಮಲವ ನಂಬಿ ಭಜಿಸುವದೆಂತೊ ಪ.

ಗ್ರಾಸವಾಸಗಳಿಗೆ ಇಲ್ಲವೆಂದು ನಿನ್ನ
ಬೇಸರಿಸಿ ಬೇಡ ಬಂದುದಿಲ್ಲ
ವಾಸುದೇವನೆ ನಿನ್ನ ದಾಸರ ದಾಸರ
ದಾಸರ ದಾಸ್ಯವ ಕೊಡು ಸಾಕೆಂದರೆ
.... ೧

ಆಗಬೇಕು ರಾಜ್ಯಭೋಗಗಳೆನಗೆಂದು
ಈಗ ನಾನು ಬೇಡಬಂದುದಿಲ್ಲ
ನಾಗಶಯನ ರಂಗವಿಠಲ ನಾ ನಿನ್ನ
ಬಾಗಿಲ ಕಾಯುವ ಭಾಗ್ಯ ಸಾಕೆಂದರೆ ೫

— ಎಂದು ಮುಂತಾಗಿ ಆ ಶ್ರೀಹರಿಯನ್ನು ಬೇಡುವರು. ' ಜೋಡಿಸುವೆನುಕರಗಳನು ಚರಣಕೆ । ಕೂಡಿಸೋ ತವ ದಾಸ ಜನರೊಳು' —ಇದು ಹರಿಯಲ್ಲಿ ದಾಸರ ಬೇಡಿಕೆ. ' ನೆನಹಿ ನಾತುರ ಕೊಟ್ಟು ದಾಸನೆಂದೆನಿಸಯ್ಯ'—ಇದೇ ಅವರ ಹಂಬಲ. 'ನಿನ್ನವನೆಂಬೆ ನಾನು'; 'ಎನ್ನ ಪೊರೆದು ಪಾಲಿಸೋ'; 'ನಂದ ನಂದನ ಕಾಯೋ'; 'ಎನ್ನೊಡೆಯ ರಂಗವಿಠಲ'; 'ಹೊರೆವುದು ಎನ್ನ ರಂಗವಿಠಲರೇಯ'; 'ಇಂದೆನ್ನ ಸಲಹಯ್ಯ'-ಇತ್ಯಾದಿ ಮಾತುಗಳಲ್ಲಿ ಶ್ರೀಪಾದರಾಜರ ದಾಸ್ಯಭಾವ ಕೋಡಿವರಿದಿದೆ.

ಹರಿಯನ್ನು ತಮ್ಮ ಸ್ನೇಹಿತ, ಸರಿಸಮಾನನು ಎಂದು ಭಾವಿಸಿ ಸಲಿಗೆಯಿಂದ ಆರಾಧಿಸುವುದೇ ಸಖ್ಯಭಾವ. ಈ ಸ್ನೇಹದ ವಲಯದಲ್ಲಿ ಹರಿಯನ್ನು ದಂಡಿಸುವ, ಮೂದಲಿಸುವ, ಪರಿಹಾಸ್ಯ ಮಾಡುವ ಧೈರ್ಯವನ್ನು ತೋರಿದ್ದಾರೆ, ಹರಿದಾಸರು. ಶ್ರೀಪಾದರಾಜರು ಶ್ರೀಹರಿಯನ್ನು ತಮ್ಮ ಬಾಲ್ಯದ ಗೆಳೆಯ ನನ್ನಾಗಿ ಭಾವಿಸಿಕೊಂಡು :

ಮರೆತೆಯೇನೋ ರಂಗಾ ಮಂಗಳಾಂಗ
ತುರುಕರ ಕಾಯ್ವಲ್ಲಿ ತೊಂಡನಾಗಿದ್ದೆನ್ನ ಪ.

ಕೋಲು ಕೈಯಲಿ ಕೊಳಲು ಜೋಲುಗಂಬಳಿ ಹೆಗಲ
ಮ್ಯಾಲೆ ಕಲ್ಲಿಚೀಲ ಕೊಂಕಳಲ್ಲಿ
ಕಾಲಗಡಗವನಿಟ್ಟು ಕಾಡೊಳಿಹ ಪಶುಹಿಂಡ
ಲಾಲಿಸುವ ಬಾಲಕರ ಮ್ಯಾಳದೊಳಗಿದ್ದೆನ್ನ ೧

ಕಲ್ಲುಮಣಿ ಕವಡೆಯನು ಕಾಡೊಳಿಹ ಗುಲಗಂಜಿ
ಸಲ್ಲದೊಡವೆಯ ನೀನು ಸರ್ವಾಂಗಕೆ
ಅಲ್ಲಲ್ಲಿ ಸೆಯೆ ಧರಿಸಿ ನವಿಲಗರಿಗಳ ಗೊಂಡೆ
ಅಲ್ಲಿ ಗೊಲ್ಲರ ಕೂಡ ಚಲ್ಲಾಟ ಮಾಡುತಲಿ ೨

ಸಿರಿದೇವಿ ಬಂದು ಸೇರಿದ ಬಳಿಕ ಲೋಕದಲಿ
ಸಿರಿ ಅರಸನೆಂದು ಸೇವಕರರಿವರೋ
ಶರಣಾಗತರ ಪೊರೆವ ಶ್ರೀ ರಂಗವಿಠಲಯ್ಯ
ನರಸಿಂಗ ನೀನಿರುವ ಪರಿಯು ಮುಂದಿನ ಸಿರಿಯು ೩

—ಎಂದು, ಸಿರಿದೇವಿ ಬರುವ ಮುನ್ನ ಕೃಷ್ಣ ಕಲ್ಲುಮಣಿ, ಕವಡೆ, ಗುಲಗಂಜಿ, ನವಿಲುಗರಿಗಳನ್ನು ಧರಿಸಿಕೊಂಡು ಗೊಲ್ಲ ಬಾಲಕರೊಡನೆ ಚೆಲ್ಲಾಟವಾಡುತ್ತ ಅಡವಿ ತಿರುಗಿದ ಅವಸ್ಥೆಯನ್ನು ಅವನಿಗೆ ನೆನಪುಮಾಡಿಕೊಟ್ಟಿದ್ದಾರೆ. ಹಾಗೆಯೇ 'ನೀನೇ ಬಲ್ಲಿದನೋ ರಂಗಾ। ನಿನ್ನ ದಾಸರು ಬಲ್ಲಿದರೋ' ಎನ್ನುವ ಕೀರ್ತನೆಯಲ್ಲಿ ಹರಿಯೇ ಭಕ್ತರ ಅಧೀನನಾದ ಮೇಲೆ ಅವನ ಬಲ್ಲಿದತನವೇನು ಬಂತು ಎಂದು ಆಡಿಕೊಳ್ಳುತ್ತಾರೆ. ಭಕ್ತನಾದ ಪಾರ್ಥನ ರಥವ ಸೂತನಾಗಬೇಕಾಯಿತು, ಬಲಿಯ ಮನೆಯ ಬಾಗಿಲು ಕಾಯಬೇಕಾಯಿತು, ಭೀಷ್ಮನಿಂದ ಪೆಟ್ಟು ತಿಂದಾಯಿತು, ಪ್ರಹ್ಲಾದನ ಕರೆಗೆ ಓಗೊಟ್ಟು ಕಂಬದಿಂದ ಬಂದದ್ದಾಯ್ತು—ಹೀಗೆ 'ಭಕ್ತರ ತೆತ್ತಿಗ ನೀನು, ನಿನಗೆಲ್ಲಿಯ ಬಲ್ಲಿದತನ? ನೆನೆದವರ ಮನದಲ್ಲಿ ಸೆರೆಸಿಕ್ಕುವ ನೀನು ಬಲ್ಲಿದನೋ' ಎಂದು ಮುಂತಾಗಿ ಪರಿಹಾಸ್ಯ ಮಾಡಿರುವರು.

ಭಕ್ತ ಭಗವಂತನಲ್ಲಿ ಸತಿ-ಪತಿ ಭಾವವನ್ನಾರೋಪಿಸಿಕೊಂಡು ಭಕ್ತಿಸಾಧನೆ ಮಾಡುವುದೇ ಮಧುರಭಾವ. ಈ ಭಾವದ ಹಿನ್ನೆಲೆಯಲ್ಲಿ ಕೃಷ್ಣನನ್ನು ಇನಿಯನೆಂದು ಭಾವಿಸಿ ಹರಿದಾಸರೆಲ್ಲರೂ

ಗೋಪಿಯರಾಗಿ ಹಾಡಿದ್ದಾರೆ; ಅವನ ವಿರಹವನ್ನು ಕಲ್ಪಿಸಿಕೊಂಡು ಪರಿತಪಿಸಿದ್ದಾರೆ; ಅವನ ಆಗಮನವನ್ನು ಹಂಬಲಿಸಿ ಕಾದಿದ್ದಾರೆ. ದಾಸ್ಯಭಾವವನ್ನು ಬಿಟ್ಟರೆ ಹರಿದಾಸರಲ್ಲಿ ಮೇಲುಗೈ ಪಡೆದಿರುವ ಮಧುರಭಾವ ಶ್ರೀಪಾದರಾಜರಲ್ಲಿ ವಿಶೇಷವಾಗಿದೆ. ಅವರ 'ಭ್ರಮರಗೀತೆ' 'ವೇಣುಗೀತೆ'ಗಳು ಸುಪ್ರಸಿದ್ಧವಾಗಿವೆ. ಗೋಪಿಯರ ವಿರಹಾಲಾಪ, ಪ್ರಣಯಾವೇಶಗಳು, ಶೃಂಗಾರ ಚೇಷ್ಟೆಗಳು ಅವರ ಕೃತಿಗಳಲ್ಲಿ ವಿಸ್ತಾರವಾಗಿ ಮೂಡಿವೆ.

ಕೃಷ್ಣ ಬಿಲ್ಲ ಹಬ್ಬಕ್ಕೆಂದು ಮಾವ ಕಂಸನ ಊರಾದ ಮಧುರೆಗೆ ಹೋಗುವನೆಂಬ ಸುದ್ದಿಯೇ ಗೋಪಿಯರನ್ನು ತಲ್ಲಣಗೊಳಿಸಿದೆ.

ಕೇಳಿದ್ಯಾ ಕೌತುಕವನ್ನು ಕೇಳಿದ್ಯಾ....
ಚಾಳಿಕಾರ ಕೃಷ್ಣ ಪೇಳದೆ ಮಧುರೆಗೆ
ಕೋಳಿ ಕೂಗದ ಮುನ್ನ ನಾಳೆ ಪಯಣವಂತೆ

ಕರೆಯ ಬಂದಿಹನಂತೆ ಕ್ರೂರ ತಮ್ಮ
ಕಿರಿಯಯ್ಯನಂತೆ ಅಕ್ರೂರ ಪುರ
ಹೊರವಳಯದಿ ಬಿಟ್ಟು ತೇರ ಆಹಾ
ಹಿರಿಯನೆಂದು ಕಾಲಿಗೆರಗಲು ರಾಮಕೃ
ಷ್ಣರ ತಕ್ಕಿಸಿಕೊಂಡು
ಮರುಳು ಮಾಡಿದ ಬುದ್ಧಿ

—ಇದೀ ಕೀರ್ತನೆ ಗೋಪಿಯರ ಕಳವಳಗೊಂಡ, ಖತಿಗೊಂಡ ಮನಸ್ಸಿನ ಚಿತ್ರಣವಾಗಿದೆ. ಅವನು 'ಕ್ರೂರ'ನಾದ ಅಕ್ರೂರನೊಡನೆ ಮಥುರೆಗೆ ಹೋದಬಳಿಕ ಗೋಪಿಯರ ವಿರಹತಾಪ ಉಲ್ಬಣಿಸಿ ಅವರು ನಡೆಯಲಾರದ, ಮಾತನಾಡಲೂ ಶಕ್ತಿಯಿಲ್ಲದ ಸ್ಥಿತಿಗೆ ಬರುತ್ತಾರೆ. ಅನ್ನ ನೀರುಗಳನ್ನೊಲ್ಲರು, ನಿದ್ರೆಯಂತೂ ಕೃಷ್ಣನ ಹಿಂದೆಯೇ ಹಾರಿ ಹೋಗಿದೆ :

ಕೊಂಬುಕೊಳಲನೂದುತ್ತ ನಂಬಿಸಿ ಪೋದನೆಯವ್ವಾ
ಅಂಬುಜನಾಭಗೆ ಮನ ಹಂಬಲಿಸುತ್ತಿದೆಯವ್ವಾ ಪ.
ನಡೆಯಲಾರೆನೆ ಅವ್ವಾ......ಅನ್ನೋದಕ ಒಲ್ಲೆನವ್ವಾ
ಕಣ್ಣಿಗೆ ನಿದ್ರೆಬಾರದು......ಹೆಣ್ಣು ಜನ್ಮ ಸಾಕೆಯವ್ವಾ

—ಎಂದು ಬಗೆಬಗೆಯಾಗಿ ಅಲವತ್ತು ಕೊಳ್ಳುವರು. ಕೃಷ್ಣನ ಅಗಲಿಕೆಯಿಂದ ಅವರಿಗೆ 'ಘಳಿಗೊಂದು ಯುಗವಾಗಿ ತೋರುತಿದೆ'. ಮಧುರೆಯ ನಾರಿಯರು ಬಲು ನಿಪುಣೆಯರು. ರತಿ ವಿದಗ್ಧೆಯರು ಕ್ಷಣಮಾತ್ರದಲ್ಲಿ ಕೃಷ್ಣನ ಮನಸೆಳೆಯುವರು. ಬಳಿಕ 'ಗಾರು ಪಳ್ಳಿಯಲಿಪ್ಪ' ತಮ್ಮ ನೆನಪು ಅವನಿಗೆ ಬರಲು ಸಾಧ್ಯವೇ—ಇದು ಅವರ ಚಿತ್ತಗ್ಲಾನಿಗೆ ಕಾರಣ. ದಿನಗಳು ಕಳೆದಂತೆ ಕೃಷ್ಣ ಬಾರದಿರಲು :

ಪಡಿಯಿಲ್ಲದನುಭವದ ಸುಖದ ಸವಿಯನೆ ತೋರಿ
ಮಡದಿ ತಡೆದಳೋ ಮಧುರೆಯಲಿ ನಲ್ಲನ

—ಇದು ಅವರ ಆಲೋಚನಾ ಸರಣಿ. 'ವಿಧಿಗೆ ದಯವಿಲ್ಲವಕ್ಕ ಎಮ್ಮ ಮ್ಯಾಲೆ, ಯದುಪತಿಯನಗಲಿಸಿದ ಒಮ್ಮಿಂದಲೊಮ್ಮೆ' —ಇದು ಅವರ ನಿರಾಸೆಯ ಆಳ. ಅವನಿಗೆ ಹಕ್ಕಿಯ ಮೇಲಿರುವ ಪ್ರೀತಿ ನಮ್ಮ ಮೇಲಿಲ್ಲದೆ ಹೋಯಿತಲ್ಲಾ. ತಮಗೂ ಹಕ್ಕಿಯಂತೆ ರೆಕ್ಕೆಗಳಿದ್ದಿದ್ದರೆ ಗಕ್ಕನೆ ಹಾರಿ ಹೋಗಿ ಹರಿಯನ್ನು ಕೂಡುತಿದ್ದೆವಲ್ಲಾ ಎಂದು ಗೋಪಿಯರೆಲ್ಲ ಕಳವಳಿಸಿದ್ದಾರೆ. ಹೀಗೆ ಗೋಪಿಯರ ವಿರಹದ ಬಿಸಿಯುಸಿರು ಓದುಗರನ್ನೂ ತಾಕುತ್ತದೆ.

ಕೃಷ್ಣನ ವೇಣುಗಾನಕ್ಕೆ ಮನಸೋತು, ತಬ್ಬಿಬ್ಬುಗೊಂಡು ಮಾಡುತ್ತಿದ್ದ ಮನೆಗೆಲಸಗಳನ್ನು ಅಲ್ಲಲ್ಲಿಗೇ ನಿಲ್ಲಿಸಿ ಗಾನ ಕೇಳಿ ಬಂದತ್ತ ಓಡುವ ಗೋಪಿಯರ ಒಂದು ಸೊಗಸಾದ ಶಬ್ದ ಚಿತ್ರ

'ತುರುಗಾಯುಬಂದ ಗೋಪಿಯುಕಂದ ಆನಂದದಿಂದ'—ಎಂಬ ಕೀರ್ತನೆ. ಅದಷ್ಟು ಜಾಗ್ರತೆ ಕೃಷ್ಣನನ್ನು ಸೇರಬೇಕೆಂಬ ತವಕದಿಂದ :

ತಂದೆಯು ಕಂದನೆಂದು ಕೊಂಕುಳೊಳಿಟ್ಟು
ಕಂದನ ಕೆಳಗಿಟ್ಟು
ಅಂದಿಗೆ ಗೆಜ್ಜೆ ಕಿವಿಗಳಿಗಿಟ್ಟು
ಮುತ್ತಿನ ಬಟ್ಟು
ಹೊಂದಿಸಿ ಗಲ್ಲದಲ್ಲಿ ತಾನಿಟ್ಟು
ಕಸ್ತೂರಿಯು ಬಟ್ಟು
ಮುಂದಾಗಿ ಮೂಗಿನ ಮೇಲಳವಟ್ಟು
ಮನೆಬಾಗಿಲ ಬಿಟ್ಟು

ಹೊರಟಂತಹ ಗೋಪಿಯರ ಅಸ್ತವ್ಯಸ್ತಾಲಂಕಾರ ಎಂತಹವರಿಗೂ ನಗೆ ತರಿಸುತ್ತದೆ. 'ತರಳರ ಬೆದರಿಸಿ ಮಾರ್ಜಾಲಕೆ ಮೊಲೆ ತ್ವರಿತದಿ ಉಣಿಸುತ ಸರಿಸರಿಯೆನುತಲಿ' ಹೊರಗೋಡಿದ ಅವರ ಚರ್ಯೆ ಅವರ ಸಂಭ್ರಾಂತ ಮನಸ್ಸಿನ ಸಶಕ್ತ ಅಭಿವ್ಯಕ್ತಿಯೇ ಆಗಿದೆ. ಕೀರ್ತನೆಯ ಕೊನೆಯಲ್ಲಿ ಬರುವ 'ಇದೆಲ್ಲವೂ ಭಕ್ತರಿಗಾಗಿ ಭಗವಂತನ ಲೀಲೆ' ಎಂಬ ಭಾವನೆ ಇಡೀ ಕೀರ್ತನೆಗೇ ಒಂದು ಆಧ್ಯಾತ್ಮಿಕ ತಿರುವನ್ನು ತಂದುಕೊಟ್ಟಿದೆ. ಹೀಗೆ ಶ್ರೀಪಾದರಾಜರ ಮಧುರಭಾವದ ಕೃತಿಗಳಲ್ಲಿ ಕೃಷ್ಣನ ಅಗಲಿಕೆಯಿಂದ ನೊಂದ ಗೋಪಿಯರ ವಿರಹಾಲಾಪದ್ದೇ ಮೇಲುಗೈಯಾಗಿದೆ.

ಶ್ರೀಹರಿಯನ್ನು ಮಗುವೆಂದು ಭಾವಿಸಿ, ತಾವು ತಾಯಿಯಾಗಿ ಅವನನ್ನು ಎತ್ತಿ ಆಡಿಸಿ, ಮುದ್ದಿಸಿ ಮುಂಡಾಡಿ ನಲಿದಿರುವುದೂ ಹರಿದಾಸರ ಭಕ್ತಿಯ ಒಂದು ವಿಧ. ವಾತ್ಸಲ್ಯಭಾವವೆಂದೂ ಇದನ್ನು ಗುರುತಿಸಲಾಗಿದೆ. ಒಬ್ಬ ತಾಯಿ ಎಷ್ಟೆಷ್ಟು ರೀತಿಯಲ್ಲಿ

ತನ್ನ ಕರುಳಿನ ಕುಡಿಯನ್ನು ಆಡಿಸಿ ಹಾಡಿ ಊಡಿ ನಲಿಯು ಬಲ್ಲಳೋ ಅದರ ತುಂಟಾಟಗಳನ್ನು ಕಂಡು ಆನಂದಿಸಬಲ್ಲಳೋ ಅಷ್ಟೇ ಸಂತೋಷ ಸಂಭ್ರಮಗಳಿಂದ ಹರಿದಾಸರು ಹರಿಯನ್ನು ಆಡಿಸಿ ನಲಿಸಿ ನಗಿಸಿದ್ದಾರೆ. ಮಗುವಿನ ಹಟ ಮುದ್ದು ಮುಗ್ಧತೆ ಚೆಲವುಗಳೆಲ್ಲವನ್ನೂ ಬಾಲಕೃಷ್ಣನಲ್ಲಿ ಕಂಡು ಅನುಭವಿಸಿದ್ದಾರೆ. ಗೋಪಿಯರ ಜೊತೆ ತಾವೂ ಒಬ್ಬ ಗೋಪಿ ಯಾಗಿ ಕೃಷ್ಣನ ಗಲಾಟೆಯನ್ನು ತಡೆಯಲಾರದೆ ಹೋಗಿ ಯಶೋದೆಯಲ್ಲಿ ದೂರಿದ್ದಾರೆ. ಮಗು ಕೃಷ್ಣನಿಗೆ ಹೆದರಿಸಿ ಬೆದರಿಸಿ ಬುದ್ಧಿ ಹೇಳಿದ್ದಾರೆ. ಶ್ರೀಪಾದರಾಜರಲ್ಲೂ ಇಂತಹ ವಾತ್ಸಲ್ಯಭಾವದ ಕೀರ್ತನೆಗಳನ್ನು ಕಾಣಬಹುದು.

ಪೋಪು ಹೋಗೋಣ ಬಾರೋ ರಂಗ
ಪೋಪು ಹೋಗೋಣ ಬಾರೋ ಪ.

ಜಾಹ್ನವಿಯ ತೀರವಂತೆ ಜನಕರಾಯನ ಕುವರಿಯಂತೆ
ಜಾನಕಿಯ ವಿವಾಹವಂತೆ ಜಾಣ ನೀ ಬರಬೇಕಂತೆ ೧

—ಎಂದು ಮಕ್ಕಳ ಮಾತುಗಳಿಂದಲೇ ಶ್ರೀಹರಿಯನ್ನು ಕರೆದಿರು ವರು. ಹಾಗೆ ಅವನನ್ನು ಕರೆದುಕೊಂಡು ಹೋಗುವುದಾದರೂ ಎಲ್ಲಿಗೆ? ಜಾನಕಿಯೊಡನೆ ಆಗುವ ಅವನ ವಿವಾಹವನ್ನೇ ನೋಡುವುದಕ್ಕೆ! ಜೊತೆಗೆ ರುಕ್ಮಿಣಿ ಕೃಷ್ಣನಿಗೆ ಓಲೆ ಬರೆದು ದನ್ನೂ ಪ್ರಸ್ತಾಪಿಸಿರುವ ಹಿನ್ನೆಲೆಯಲ್ಲಿ ಅವರ ಅಂತರಂಗದಲ್ಲಿರುವ ಹರಿಯ ಅವತಾರ ಕಲ್ಪನೆಗಳು ಗಮನಾರ್ಹವಾಗಿವೆ.

ತಾಯಿಯ ಅಕ್ಕರೆ, ತಳಮಳ, ಮಗುವಿಗೆ ದೃಷ್ಟಿತಾಕೀತೆಂಬ ಕಳವಳ ಇತ್ಯಾದಿಗಳನ್ನು ಶ್ರೀಪಾದರಾಜರು ತಮ್ಮ ಕೃತಿಗಳಲ್ಲಿ ಸೊಗಸಾಗಿ ಹಿಡಿದಿಟ್ಟಿದ್ದಾರೆ. 'ಎಲ್ಲಾಡಿ ಬಂದ್ಯೋ ಎನ್ನ

ರಂಗಯ್ಯ ನೀ । ನೆಲ್ಲ್ಯಾಡಿ ಬಂದ್ಯೋ ಎನ್ನ ಕಣ್ಣ ಮುಂದಾಡದೆ', 'ದೃಷ್ಟಿತಾಕೀತೋ ಬೀದಿ ಮೆಟ್ಟಬ್ಯಾಡವೋ', 'ಎಲ್ಲ್ಯಾಡಿ ಬಂದ್ಯೋ ನೀ ಹೇಳಯ್ಯ' ಇತ್ಯಾದಿ ವಾತ್ಸಲ್ಯಭಾವದ ಕೀರ್ತನೆಗಳಲ್ಲಿ ಕೃಷ್ಣನ ಉಡಿಗೆ ತೊಡಿಗೆಗಳನ್ನು, ಅಲಂಕಾರ ಚೆಲವುಗಳನ್ನು ಮನದುಂಬಿ ಬಣ್ಣಿಸಿದ್ದಾರೆ. ಒಬ್ಬ ತಾಯಿಯ ಮನಸ್ಸಿನ ವಿವಿಧ ಭಾವನಾಸ್ತರಗಳು ಇಲ್ಲಿ ಸಹಜವಾಗಿ ಅಭಿವ್ಯಕ್ತವಾಗಿವೆ. ಕಣ್ಣಿಗೆ ಕಟ್ಟುವಂತಹ ವರ್ಣನೆಗಳು, ಎದ್ದು ಕಾಣುವ ಲಯಗಳಿಂದಾಗಿ ಈ ಕೀರ್ತನೆಗಳು ಸೊಗಸಾದ ನೃತ್ಯ ಸಂಯೋಜನೆಗಳಾಗಬಲ್ಲವು.

ಈ ನಾಲ್ಕೂ ಭಾವಗಳಿಂದ ಶ್ರೀಪಾದರಾಜರು ಭಗವಂತನನ್ನಾರಾಧಿಸಿ ಅವನನ್ನು ಸಾಕ್ಷಾತ್ಕರಿಸಿಕೊಂಡಿರುವುದನ್ನು ಅವರ ಕೃತಿಗಳ ಮೂಲಕವೇ ಗುರುತಿಸಬಹುದು.

ನೀ ಕರುಣಿಯೆಂದು ನಿನ್ನ ನಾ ಮೊರೆಹೊಕ್ಕೆ
ನೀಕರಿಸದೆ ಎನ್ನ ಶ್ರೀಕಾಂತ ಕಾಯಯ್ಯ

—ಎಂದು ಹರಿಯಲ್ಲಿ ಸಂಪೂರ್ಣಶರಣಾಗತರಾದ ಶ್ರೀಪಾದರಾಜರು 'ನಾ ನಿನಗೇನು ಬೇಡುವುದಿಲ್ಲ ಎನ್ನ ಹೃದಯಕಮಲದೊಳು ನೆಲಸಿರು ಹರಿಯೆ' ಎಂದು ಬೇಡಿಕೊಳ್ಳುವರು. 'ಪಾಲೊಳಗದ್ದು ನೀರೊಳಗದ್ದು ಹರಿ ನಾ ನಿನ್ನ ನಂಬಿದೆನೋ' ಎಂದು ತಮ್ಮ ಸಂಪೂರ್ಣ ಹೊಣೆಯನ್ನು ಶ್ರೀಹರಿಗೇ ಒಪ್ಪಿಸುವರು. ಅವನನ್ನು ಕಂಡು, ಅಪ್ಪಿಮುದ್ದಾಡುವ ಬಯಕೆ ಅವರದು.

ಪಚ್ಚೆ ಬಾವುಲಿಗಳನು ನಿನ್ನ ಕಿವಿಯೊಳಗಿಟ್ಟು
ಮೆಚ್ಚಿ ಮುದ್ದಾಡುವೆನು
....

ಮುತ್ತಿನ ಹಾರವನು ಕಂಠದೊಳಿಟ್ಟು
ಎತ್ತಿ ಮುದ್ದಾಡುವೆನು...ರಂಗಾ, ಬಾರೋ ಮನೆಗೆ

ಎಂದು ಹಂಬಲಿಸಿ ಕರೆಯುವರು. ಅವರ ಆ ಬಯಕೆಗೆ ಇಂಬು ಗೊಟ್ಟಂತೆ ಹರಿ ಅವರಿಗೆ ಕನಸಿನಲ್ಲಿ ಕಾಣಿಸಿಕೊಂಡಿರುವನು :

ಇಂದಿನಿರುಳಿನ ಕನಸಿನಲ್ಲಿ ಬಂದು
ಮುಂದೆ ನಿಂದುದ ಕಂಡೆನೆ ಗೋವಳನ

—ಎನ್ನುವರು. 'ಸರಸಿಜೋದ್ಭವಗೊಲಿದು... ಉರಸಿನಮೇಲೆ ಸರಸಿಜಾಕ್ಷಿಯನಿರಿಸಿ' ಬಂದಂತಹ ರಂಗನ ಅಲಂಕಾರಾದಿಗಳನ್ನು ವರ್ಣಿಸುವರು. ಧೀರ, ಶರಧಿಗಂಭೀರ, ಕಸ್ತೂರಿತಿಲಕಧರ ನಾದ ಶ್ರೀಹರಿ ಹೀರ ಮೌಕ್ತಿಕ ಧರಿಸಿದ ನವನೀತಚೋರನೆನ್ನು ವರು. ಅಂತಹ ಶ್ರೀಹರಿಯ ಮಂಗಳಮೂರ್ತಿಯನ್ನು ಕಣ್ಣಾರ ಕಂಡಂತಾಗಿ ಅವನ ಸರ್ವಾಂಗವನ್ನೂ ಬಣ್ಣಿಸಿ ನಮಿಸುವರು :

ಶ್ರೀರಂಗವಿಠಲನ ಶ್ರೀ ಮಕುಟಕೆ ಶರಣು ಪ.

ಶಿರದಲ್ಲೊಪ್ಪುವ ನೀಲಕುಂತಳಕೆ ಶರಣು
ಸಿರಿ ಸಹೋದರನರ್ಧದವಳಿಗೆ ಶರಣು ಅ.ಪ.

ಸೊಂಪುನೋಟದ ಚೆಲುವ ಸೋಗೆಗಣ್ಣಿಗೆ ಶರಣು
ಸಂಪಿಗೆಯ ಕುಸುಮಸಮ ನಾಸಿಕಕೆ ಶರಣು
ಗುಂಪುರತ್ನದ ಕರ್ಣಕುಂಡಲಗಳಿಗೆ ಶರಣು
ಇಂಪುದರ್ಪಣ ನಿಭ ಕಪೋಲಗಳಿಗೆ ಶರಣು ೧

—ಹೀಗೆ 'ಮಂಗಳ ವೈಭೋಗಂಗಳ ಅಂಘ್ರಿದ್ವಯಕೆ ಶರಣು' ಎಂದು ಪಾದದಿಂದ ಮಕುಟದವರೆಗೂ ಭಕ್ತಿಪರವಶರಾಗಿ ನಮಿಸಿದ್ದಾರೆ. ಇಲ್ಲಿ ಶ್ರೀಪಾದರಾಜರು ಯಾವುದೇ ಮಾನವ ಸಂಬಂಧವನ್ನೂ ಹರಿಗೆ ಆರೋಪಿಸಿಲ್ಲ. ಅವನನ್ನು ಕಂಡ ತೃಪ್ತಿ,

ಸಮಾಧಾನಗಳಿಂದ ಕೇವಲ ಭಕ್ತಭಗವಂತರ ನಿಲುವಿನಲ್ಲಿ ಅವನ ಚೆಲುವನ್ನು ಕೊಂಡಾಡಿರುವರು. ಇಂತಹ ಕೀರ್ತನೆಗಳನ್ನು ಶಾಂತಭಾವದ ಕೃತಿಗಳೆಂದು ಗುರುತಿಸುವುದು ರೂಢಿ. ಇದು ಭಕ್ತನ ಜ್ಞಾನದ ನಿಲುವನ್ನು ತೋರಿಸುತ್ತದೆ. ಭಗವಂತನ ವಿಶಿಷ್ಟಗುಣ, ಶಕ್ತಿ ಮಹಿಮಾದಿಗಳನ್ನು ಕಂಡ ಭಕ್ತನ ವಿಸ್ಮಯ ಸಂತೋಷ ಮೆಚ್ಚುಗೆಗಳು ಶಾಂತಭಾವದ ಕೃತಿಗಳಲ್ಲಿ ಹೊರ ಹೊಮ್ಮಿವೆ. 'ಭಕ್ತಿಬೇಕು ವಿರಕ್ತಿಬೇಕು', 'ಭೂಷಣಕೆ ಭೂಷಣ ಇದು ಭೂಷಣ', 'ಮನೆಯಿಂದ ಸಂತೋಷ ಕೆಲವರಿಗೆ ಲೋಕದೊಳು'—ಇವು ಶ್ರೀಪಾದರಾಜರ ಕೆಲವು ಶಾಂತಭಾವದ ಕೃತಿಗಳು.

ಅವರ ತತ್ತ್ವಪರವಾದ ಕೀರ್ತನೆಗಳನ್ನು ಗಮನಿಸಿದರೆ ಅವುಗಳಲ್ಲಿ ಹರಿಸರ್ವೋತ್ತಮತ್ವ, ತಾರತಮ್ಯ, ಪಂಚಭೇದ, ಗುರುಸ್ತುತಿ, ಮಾಯಾವಾದಖಂಡನೆ ಇತ್ಯಾದಿ ತತ್ತ್ವಗಳು ಹಾಸುಹೊಕ್ಕಾಗಿರುವುದನ್ನು ಗಮನಿಸಬಹುದು.

ಬಿಡಿಬಿಡಿಸಂದೇಹವನು ಪೊಡವಿಮನುಜರೆಲ್ಲ
ಒಡೆಯನೊಬ್ಬನೆ ಜಗಕೆ ರಂಗವಿಠಲ

—ಎಂದು ಹರಿಸರ್ವೋತ್ತಮನೆಂಬುದನ್ನು ಎತ್ತಿಹಿಡಿದಿರುವರು. ತಮ್ಮ ಈ ನಿಲುವನ್ನು ಸ್ಥಿರೀಕರಿಸಲು ಭಾಗವತದ ಭೃಗು ಮುನಿಗಳ ಕತೆಯನ್ನು ಉದಾಹರಿಸುವರು. 'ಹರಿಹರರು ಸರಿಯೆಂಬ ಮರುಳ ಜನರು ಹರಿಹರರ ಚರಿತೆಯನು ತಿಳಿದು ಭಜಿಸುವುದು' ಎಂಬ ಕೀರ್ತನೆಯಲ್ಲಿ 'ಮುರಹರನು ಪುರಹರನ ಗೆಲಿದುದರಿಯಾ' ಎಂದು ಕೇಳುತ್ತಾ ಮಹಾಭಾರತ ತಾತ್ಪರ್ಯ ನಿರ್ಣಯದಲ್ಲಿ ಬರುವ ಹರಿಹರರ ಸಾಮರ್ಥ್ಯಪ್ರಕಟಣೆಯ

ಕತೆಯನ್ನು ಉದಾಹರಿಸಿ ಹರಿಯ ಗೆಲುವನ್ನು ಪ್ರತಿಪಾದಿಸಿರುವರು. ಹಾಗೆಯೇ ಭಸ್ಮಾಸುರನ ಕತೆ, ಭಾಗವತದ ಅಂಬರೀಷನ ಕತೆ, ಭಾರತದಲ್ಲಿ ಬರುವ ಅಶ್ವತ್ಥಾಮನು ಪ್ರಯೋಗಿಸಿದ ನಾರಾಯಣಶಾಸ್ತ್ರವನ್ನ ಕೃಷ್ಣ ತನ್ನ ತಪೋಬಲದಿಂದ ನಿಗ್ರಹಿಸಿ ಉತ್ತರೆಯ ಗರ್ಭಸ್ಥ ಶಿಶುವನ್ನು ರಕ್ಷಿಸಿದ ಕತೆ ಇತ್ಯಾದಿಗಳನ್ನು ಮೇಲಿಂದ ಮೇಲೆ ಹೇಳುತ್ತಾ ತಮ್ಮ ತಾತ್ವಿಕ ನಿಲುವನ್ನು ಸಮರ್ಥಿಸಿಕೊಂಡಿರುವ ರೀತಿ ಮೆಚ್ಚತಕ್ಕುದಾಗಿದೆ. ಗೋವರ್ಧನೋದ್ಧರಣ, ಅಹಲ್ಯಾಶಾಪ ವಿಮೋಚನೆ, ಕುಚೇಲ. ಪಾರಿಜಾತಾಪಹರಣ, ಕಾಳಿಂಗಮರ್ದನ–ಮುಂತಾದ ಪುರಾಣಕತೆಗಳನ್ನು ಶ್ರೀಪಾದರಾಜರು ವಿಪುಲವಾಗಿ ಪ್ರಸ್ತಾಪಿಸುತ್ತಾ ಜನಸಾಮಾನ್ಯರ ಪುರಾಣಪ್ರಜ್ಞೆಯನ್ನು ತಮ್ಮ ತತ್ತ್ವಗಳ ಪ್ರಚಾರಕ್ಕಾಗಿ ಸಮರ್ಥವಾಗಿ ಬಳಸಿಕೊಂಡಿದ್ದಾರೆ. ಧ್ರುವ, ವಿಭೀಷಣ, ಶಕಟಾಸುರ ಅಹಲ್ಯೆ, ಬಲಿ. ಭೀಷ್ಮ, ಪ್ರಹ್ಲಾದ, ಅಜಾಮಿಳ, ಮುರ, ಅಕ್ರೂರ, ಉದ್ಧವ, ಪಿಂಗಳೆ, ಪೂತನಿ, ದ್ರೌಪದಿ, ಶತಧನ್ವ, ವೀಂದ್ರಗ, ಕೀಚಕ, ಬಾಣಾಸುರ, ಚಾಣೂರ, ಕಿರ್ಮೀರ, ವಾಷ್ಟಿಕ. ಯಮಳಾರ್ಜುನರೇ ಮೊದಲಾದ ಪುರಾಣ ಪಾತ್ರಗಳು ಶ್ರೀಪಾದರಾಜರ ತತ್ತ್ವ ಪ್ರಚಾರ ಮಾಧ್ಯಮಗಳಾಗಿ ವರ್ತಿಸಿವೆ ಧ್ರುವ, ಪ್ರಹ್ಲಾದ, ದ್ರೌಪದಿ ಮೊದಲಾದ ಪಾತ್ರಗಳನ್ನು ಹರಿಯ ಕರುಣೆ ಭಕ್ತವತ್ಸಲತೆಗಳನ್ನು ಹೇಳಲು ಉಪಯೋಗಿಸಿಕೊಂಡರೆ ಶಕಟಾಸುರ, ಪೂತನಿ, ಕೀಚಕ ಇತ್ಯಾದಿ ಪಾತ್ರಗಳನ್ನು ಶ್ರೀಹರಿ ದುಷ್ಟಶಿಕ್ಷಕನೆಂದು ಸಾರಲು ಬಳಸಿಕೊಂಡಿದ್ದಾರೆ. ಮುಂದೆ ಹರಿದಾಸ ಸಾಹಿತ್ಯ ಪರಂಪರೆಯಲ್ಲಿ ಈ ಪುರಾಣಗಳ ಬಳಕೆಯೇ ಒಂದು ಸಂಪ್ರದಾಯವಾಗಿ ಪರಿಣಮಿಸಿರುವುದನ್ನು ಕಾಣಬಹುದು.

ಭಾಗವತದಲ್ಲಿ ಬರುವ ಹರಿಯ ಮತ್ಸ್ಯ, ಕೂರ್ಮ, ವರಾಹಾದಿ ದಶಾವತಾರಗಳ ಸ್ತುತಿಯೂ ಶ್ರೀಪಾದರಾಜರಲ್ಲಿ ಬರುತ್ತದೆ:

ಮಂಗಳ ವೇದಸ್ತೇಯಾರಿ ಶೃಂಗಾರಕೂರುಮ ನಮ್ಮ
ಪೊಂಗಣ್ಣನ ಸೀಳ್ದ ನರಸಿಂಗ ವಟು ಭಾರ್ಗವನೆ
ಅಂಗದ ಪಾರ್ಥ ಕಂಬು ತುರಂಗಪ ರಂಗವಿಠಲ
ತುಂಗಮಹಿಮ ನಮೋ ಎಂಬೆವೋ ಹೇ ಕಿತವಾ

ಹರಿಗೆ ಜೋಗುಳ ಹಾಡಿ ತೂಗುವಲ್ಲಿ ದಶಾವತಾರಗಳನ್ನು ಪ್ರಸ್ತಾಪಿಸಿರುವರು ಉದಾ: 'ಜೋ ಜೋ ಜೋ ಜೋ ಜೋ ರಂಗಧಾಮ', ಮತ್ತು 'ಲಾಲಿ ಗೋವಿಂದ ಲಾಲಿ ಕೌಸಲ್ಯಾ ಬಾಲ ಶ್ರೀರಾಮ ಲಾಲಿ'—ಈ ಕೀರ್ತನೆಗಳು.

ಮಧ್ವಾಚಾರ್ಯರ ಸ್ತುತಿಯಾದ ಇವರ 'ಮಧ್ವನಾಮ' ೨೭ ನುಡಿಗಳಿಂದ ಕೂಡಿದ ದೀರ್ಘಕೃತಿಯಾಗಿದ್ದು, ಮಧ್ವಮತದ ಪ್ರಮುಖತತ್ತ್ವಗಳಲ್ಲಿ ಒಂದಾದ ಜೀವರ ಹನುಮ, ಭೀಮ, ಮಧ್ವ—ಈ ಅವತಾರತ್ರಯಗಳ ಪ್ರಸ್ತಾಪವನ್ನೂ ಒಳಗೊಂಡಿದೆ. ಎಲ್ಲವೂ ಹರಿಚಿತ್ತದಂತೆಯೇ ನಡೆಯುವುದು 'ನಾಹಂಕರ್ತಾ ಹರಿಕರ್ತಾ' ಎಂಬ ತತ್ತ್ವ:

ನಿನ್ನಾಧೀನ ಶರೀರ ಕರಣ ಚೇಷ್ಟೆಗಳೆಲ್ಲ
ನಿನ್ನಾಧೀನ ಬಂಧಮೋಕ್ಷ ನಿರಯಗಳು

—ಇತ್ಯಾದಿಯಾಗಿ, ಒಂದು ಸುಳಾದಿಯಾಗಿ ರೂಪುಗೊಂಡಿದೆ. 'ಮಾಯಮತವೊಳಿತಲ್ಲ ನಿನಗೆ ನಾಯಿಜನ್ಮವು ಬಿಡದಲ್ಲ' ಎಂಬ ಕೀರ್ತನೆಯಲ್ಲಿ ಅದ್ವೈತ ಮತದ ನೇರವಾದ ಖಂಡನೆಯನ್ನು ಕಾಣುತ್ತೇವೆ. ಮಠಾಧಿಪತಿಗಳಾಗಿದ್ದ ಶ್ರೀಪಾದರಾಜರಲ್ಲಿ ತತ್ತ್ವಪ್ರತಿಪಾದನೆಯ ಕೃತಿಗಳೇ ಹೆಚ್ಚಿನ ಸಂಖ್ಯೆಯಲ್ಲಿರು

ವುದು ಗಮನಾರ್ಹ. 'ಸಾರಮಧ್ವಶಾಸ್ತ್ರವನ್ನೋದದೆ ಗುರುತಾರ ತಮ್ಯಜ್ಞಾನ ಪುಟ್ಟದು' ಎಂಬುದು ಶ್ರೀಪಾದರಾಜರ ದೃಢವಾದ ನಂಬಿಕೆ. 'ಮರುದಂಶರ ಮತ ಪಿಡಿಯದೆ ಇಹಪರದಲ್ಲಿ ಸುಖವಿಲ್ಲ'—ಇದೇ ಅವರ ತಾತ್ತ್ವಿಕ ನಿಲುವು.

ಶ್ರೀಪಾದರಾಜರ ಉಪದೇಶಾತ್ಮಕ ಕೀರ್ತನೆಗಳು ಸಂಖ್ಯೆಯಲ್ಲಿ ತುಂಬ ಕಡಿಮೆ. ಸಂಸಾರ, ಐಹಿಕ ಸುಖಗಳನ್ನು ಕುರಿತಂತೆ: 'ಆಕಟಕಟ ಸಂಸಾರವನ್ನು ನೆಚ್ಚಿ ಕೆಡಬ್ಯಾಡ ವಿಕಟದಲಿ ಮಾನವರು ಕೆಟ್ಟರೆಲ್ಲರು ನಿಜ', 'ತೊಳಲಿ ಸಂಸಾರ ಚಕ್ರದಲಿ ಬಳಲಿದ ಜೀವಗಣಕೆ ಸಂತತ ನಳಿನನಾಭಾ ನಿನ್ನ ಪದಾಂಭೋಜ ನೆಳಲು ನೆಮ್ಮುಗೆಯಲ್ಲವೆ', 'ಭವವೆಂಬಟವಿ', 'ಬೆಂದಸಂಸಾರ', 'ಕಾಳ ಬೆಳದಿಂಗಳು ಈ ಸಂಸಾರ ಕತ್ತಲೆ ಬೆಳದಿಂಗಳು' ಇತ್ಯಾದಿ ಮಾತುಗಳನ್ನು ಅವರ ಕೃತಿಗಳಲ್ಲಿ ಅಲ್ಲಲ್ಲಿ ಕಾಣುತ್ತೇವೆ. ಇಂತಹ ಇಕ್ಕಟ್ಟಿನಲ್ಲಿ ಸಿಕ್ಕಿ ವ್ಯರ್ಥವಾಗಿ ಆಯುಷ್ಯವನ್ನು ಕಳೆಯುತ್ತಿರುವವರಿಗೆ ದಾಸರು ಹರಿನಾಮ ಸ್ಮರಣೆ, ಹರಿಭಕ್ತಿ, ವಿಷಯವಿರಕ್ತಿಗಳನ್ನು ಬೋಧಿಸಿದ್ದಾರೆ. ಹರಿಕರುಣೆ, ಗುರುಕರುಣೆಗಳ ಮಹತ್ವವನ್ನು ತಿಳಿಯಪಡಿಸಿರುವರು.

'ಉಂಟಾದ ಕಾಲಕ್ಕೆ ನೆಂಟರು ಇಷ್ಟರು ಬಂಟರಾಗಿ ಬಾಗಿಲ ಕಾಯ್ವರು। ಉಂಟಾದತನ ತಪ್ಪಿ ಬಡತನ ಬಂದರೆ ಒಂಟೆಯಂತೆ ಗೋಣ ಮೇಲೆತ್ತುವರು'–ಇದು ಶ್ರೀಪಾದರಾಜರು ಗಮನಿಸಿರುವ ಜೀವನಾನುಭವ. ಅಸ್ಥಿರವಾದ ಈ ದೇಹದ ಆಸೆಯನ್ನು ಬಿಟ್ಟು 'ಚಿತ್ತಜನಯ್ಯನ ಚಿಂತಿಸು' ಎಂಬುದೇ ದಾಸರ ಉಪದೇಶದ ಸಾರ. 'ಯಾಕೆ ಪುಟ್ಟಿಸಿದಿ ನೀ ಸಾಕಲಾರದೆ ಜಗದೇಕ ಕಾರಣಪುರುಷನೆ ಕೃಷ್ಣ' ಎಂಬ ಕೀರ್ತನೆಯಲ್ಲಿ ಸಾಮಾನ್ಯಜನರ ಬವಣೆಯನ್ನು ಕಾಣಬಹುದು. ಬಡತನದ

ಯಾತನೆ, ಋಣದಬಾಧೆ, ಜೊತೆಯುವರ ಅಲಕ್ಷ್ಯ, ತಿರಿದು ತಿನ್ನುವ ಸ್ಥಿತಿಗಳೆಲ್ಲ ಇಲ್ಲಿ ಬಿಚ್ಚಿಕೊಂಡಿವೆ.

ಡಂಭಾಚಾರಿಗಳನ್ನು ಗುರುತಿಸಿ ಅವರಿಗೆ ದಾಸರು ತಿಳಿಯ ಹೇಳಿರುವ ರೀತಿಯಿದು :

ಸುಮ್ಮನೆ ವೈಷ್ಣವನೆಂಬಿರಿ ಪರ
ಬೊಮ್ಮ ಸುಜ್ಞಾನವನರಿಯದ ಮನುಜನ

ಕೇವಲ ಬಾಹ್ಯ ವೇಷಭೂಷಣಗಳಿಂದ ಕೂಡಿರುವನಲ್ಲದೆ ಅಂತ ರಂಗಶುದ್ಧಿ ಅವನಲ್ಲಿದೆಯೇ ಎಂದು ಕೇಳಿ; ಜಗತ್ತು ಸತ್ಯ, ಪಂಚಭೇದಗಳು ಇತ್ಯಾದಿಗಳನ್ನರಿತು ರಾಗದ್ವೇಷಗಳನ್ನು ಬಿಟ್ಟು ನಿಜವಾದ ದಾಸರ ಸಂಗ ಸುಖದೊಳಗಿರುವವನೇ ವೈಷ್ಣವನೆಂಬ ತಮ್ಮ ನಿಲುವನ್ನು ಸ್ಪಷ್ಟಪಡಿಸಿದ್ದಾರೆ, ಶ್ರೀಪಾದರಾಜರು.

ಇಂತಹ ಬಿಡಿಕೀರ್ತನೆಗಳೇ ಅಲ್ಲದೆ ರಚನೆಯ ದೃಷ್ಟಿ ಯಿಂದಲೂ ಪ್ರತಿಪಾದಿತ ವಿಷಯದ ದೃಷ್ಟಿಯಿಂದಲೂ ಗಮನಿಸ ಬೇಕಾದ, ಹಿಂದೆಯೇ ಹೆಸರಿಸಿರುವ, ಮತ್ತೊಂದು ರಚನೆ ಶ್ರೀಪಾದರಾಜರ ವೃತ್ತನಾಮ. ಒಂದು ಶ್ಲೋಕ, ಒಂದು ಪದ ಪುನಃ ಒಂದು ಶ್ಲೋಕ, ಪದ ಹೀಗೆ ಮುಂದುವರಿಯುವ ಪ್ರಕಾರವಿದು :

ಮಾನನಿಧಿ ಶ್ರೀಕೃಷ್ಣ ಮಧುರೆಗೈದುವನಂತೆ
ಏನು ಪಥವಮ್ಮ ನಮಗೆ ಪ.
ಮಾನನೇನಿನ್ನಿದಕೆ ಮಾನಿನಿಯರೆಲ್ಲರು
ಆಣೆಯನು ಕಟ್ಟಿವನಿಗಡ್ಡ ನಿಲ್ಲುವ ಬನ್ನಿ ಅ.ಪ.
ಕಳ್ಳತನವೇ ನಮ್ಮ ವಲ್ಲಭರು ಈ ಸುಳುವು
ಎಲ್ಲವನು ಬಲ್ಲರಮ್ಮ

ಒಲ್ಲದಲೆ ನಮ್ಮ ಬಿಟ್ಟರೆ ಒಳಿತು ವನಜಾಕ್ಷ
ಎಲ್ಲಿ ಗೈದಿದರೆ ನಾವಲ್ಲಿಗೈದುವ ಬನ್ನಿ ೧
....

ಶ್ಲೋಕ

ಹಲವು ಕಾಲವು ನಿನ್ನ ಸ್ನೇಹಸುಖವ ಹಾರೈಸಿಕೊಂಡಿರುತಿಹ
ಲಲನಾವ್ಯೂಹವ ಬಿಟ್ಟು ಅಕ್ರೂರನೊಡನೆ ನೀ ಮಧುರೆಗೆ ಪೋದರೆ
ಕಳೆಯಲಾಪೆವೇ ಕಾಂತ ಕೇಳು ದಿನವ ಈ ಕಂತುವಿನ ಬಾಧೆಗೆ
ಘಳಿಗೊಂದು ಯುಗವಾಗಿ ತೋರುತಿಹುದೋ ಜಲಜಾಕ್ಷ ನೀನಲ್ಲದೆ

ಪದ

ಬ್ಯಾಡ ಮಧುರೆಗೆ ಪೋಗಬ್ಯಾಡೆಲವೊ ಶ್ರೀಕೃಷ್ಣ
ಬೇಡಿಕೊಂಬೆವೋ ದೈನ್ಯದಿ
ನೋಡು ನಮ್ಮ್ಯಾಲೆ ದಯಮಾಡು ಮದನಂಗೀಡು
ಮಾಡುವುದೇನುಚಿತವೆಲೋ ಮಾಧವ ಕೃಪಾಕರನೆ ೪

—ಹೀಗೆ ಹನ್ನೆರಡು ನುಡಿಗಳ ವಿಸ್ತಾರದಲ್ಲಿರುವ ಈ ಕೃತಿಯಲ್ಲಿ ಸಂಭಾಷಣಾತಂತ್ರದ ಸೊಗಸನ್ನು ಕಾಣುತ್ತೇವೆ. ಬಿಲ್ಲಹಬ್ಬಕ್ಕೆಂದು ಮಧುರೆಗೆ ಹೊರಟುನಿಂತ ಕೃಷ್ಣನನ್ನು ಗೋಪಿಯರೆಲ್ಲ ಅಡ್ಡಗಟ್ಟಿ ನಿಲ್ಲಿಸುವುದೇ ಇಲ್ಲಿಯ ವಸ್ತು. ಕೃಷ್ಣ–ಗೋಪಿಯರ ಮಾತಿನ ಚಕಮಕಿಯ ಹಿನ್ನೆಲೆಯಲ್ಲಿ ಪರಸ್ಪರರ ವಿಶ್ವಾಸ ಕಳೆಕಟ್ಟಿದೆ. 'ಶೃಂಗಾರ ಪಾರಿಜಾತ'*ವೆಂದೂ ಈ ಕೃತಿಯನ್ನು ಕರೆದಿರುವುದು ಅನ್ವರ್ಥನಾಮವಾಗಿದೆ.

ಶ್ರೀಪಾದರಾಜರ ಭ್ರಮರಗೀತೆ ಗೋಪಿಯರ ವಿರಹಗೀತೆಯೇ ಆಗಿದೆ. ಪಲ್ಲವಿ ಹಾಗೂ ಒಂಬತ್ತು ನುಡಿಗಳಿಂದ ಕೂಡಿರುವ

* ಶ್ರೀಪಾದರಾಜರ ಕೃತಿಗಳು. ಪು. ೧೧೩ರ ಅಡಿಟಿಪ್ಪಣಿ.

ಈ ಕೃತಿ ಭಾಗವತ ದಶಮಸ್ಕಂಧದ ಪೂರ್ವಾರ್ಧದಲ್ಲಿ ಬರುವ ಭ್ರಮರಗೀತೆಯ ಪ್ರೇರಣೆಯೇ ಆಗಿದೆ.

ಭೃಂಗಾ ನಿನ್ನಟ್ಟಿದನೇ ಶ್ರೀರಂಗ ಮಧುರೆಲಿ ನಿಂದು
ಅಂಗಜಲುಬ್ಧಕ ಪೂಗೋಲಂಗಳ ತಡೆಯನಿಕ್ಕಿ
ಅಂಗನೇರೆಂಬೋ ಹುಲ್ಲೆ ಮೃಗಂಗಳಿಗೆ ಗುರಿಯೆಚ್ಚು
ಹಿಂಗಿಸುತ್ತೈದಾನೆ ಅಸುವ ಹೇ ಕಿತವಾ ಪ.

ಹೀಗೆ ಪ್ರಾರಂಭವಾಗುವ ಭ್ರಮರಗೀತೆ ಕೀರ್ತನೆಯ ರೂಪದಲ್ಲಿದ್ದರೂ ಪ್ರಗಾಥವನ್ನು ಹೋಲುತ್ತದೆ. ಮೂಲದಲ್ಲಿ ಬರುವಂತೆ ಇಲ್ಲಿ ಉದ್ಧವನ ಪ್ರವೇಶವಿಲ್ಲ. ತಮ್ಮ ಬಳಿಗೆ ಬಂದ ಭ್ರಮರವೊಂದನ್ನು ನೋಡಿದ ಗೋಪಿಯರು 'ನಿನ್ನ ನೋಡೆ ನಮ್ಮ ಅಚ್ಯುತನ್ನ ಕಂಡಂತಾಯಿತಯ್ಯ' ಎಂದು ಸಮಾಧಾನ ಪಟ್ಟುಕೊಂಡು ಅದನ್ನುದ್ದೇಶಿಸಿ ಕೃಷ್ಣನ ಕುಶಲವಾರ್ತೆಯನ್ನು ಕೇಳುವರು. ಈ ಇಡೀ ಕೃತಿ ಸಂಸ್ಕೃತ ಮೂಲದ ಸಂಗ್ರಹರೂಪವಾಗಿದ್ದು, ದಾಸರ ಕಲ್ಪನೆಯೂ ಜೊತೆಗೂಡಿದೆ. ಮುಂದೆ ಶ್ರೀಪಾದರಾಜರ ಪ್ರಶಿಷ್ಯರಾದ ವಾದಿರಾಜರೂ ಇದೇ ವಸ್ತುವನ್ನಾರಿಸಿಕೊಂಡು, ಮೂಲಕ್ಕೆ ಅನುಸಾರವಾಗಿಯೇ ವಿವಿಧ ರಾಗ ಮತ್ತು ತಾಳಗಳನ್ನನುಸರಿಸಿ, ಹಾಡುಗಳ ಮೂಲಕ 'ಭ್ರಮರಗೀತೆ'ಯೊಂದನ್ನು ರಚಿಸಿದ್ದಾರೆ.

ಈಗಾಗಲೇ ಹೆಸರಿಸಿರುವ 'ಶ್ರೀ ಲಕ್ಷ್ಮೀನೃಸಿಂಹ ಪ್ರಾದುರ್ಭಾವ ದಂಡಕ' ಶ್ರೀಪಾದರಾಜರ ಮತ್ತೊಂದು ವಿಶೇಷ ರಚನೆ. ವಿಷ್ಣುವಿನ ನರಸಿಂಹಾವತಾರ, ಹಿರಣ್ಯಕಶಿಪುವಿನ ಸಂಹಾರ, ಬಾಲಕ ಪ್ರಹ್ಲಾದನಿಗೆ ಅನುಗ್ರಹ–ಇವೇ ಕೃತಿಯ ವಸ್ತು. ಭಾಗವತ ಸಪ್ತಮಸ್ಕಂಧದ ಅಷ್ಟಮ ಅಧ್ಯಾಯದಲ್ಲಿ ಬರುವ

ಕತೆಯ ಅನುವಾದದಂತಿದೆ, ಈ ಕೃತಿ. ಐದ್ಯೈದು ಮಾತ್ರೆಗಳ ಗಣಗಳಿಂದ ಕೂಡಿದೆ.

ಶ್ರೀರಮಾ ಮಾನಿನೀ ಮಾನಸೇಂದೀವರೋ
ತ್ಫುಲ್ಲ ಸಂಪುಲ್ಲ ಚಂದ್ರಾ ಚಿದಾನಂದ ಸಾಂ
ದ್ರಾ ಸದಾ ಸನ್ನುತೇಂದ್ರಾ ನಮೋಪೇಂದ್ರ ನಿ
ಸ್ತಂದ್ರ ನೀ ಕೇಳು...

—ಎಂದು ಪ್ರಾರಂಭವಾಗಿ ಸು. ೫೪೬ ಸಾಲುಗಳಲ್ಲಿ ನಿರರ್ಗಳ ವಾಗಿ ಹರಿದಿದೆ. ಆದ್ಯಂತ ಪ್ರಾಸಗಳಿಲ್ಲದಿದ್ದರೂ ಒಳ ಪ್ರಾಸವೇ ಈ ರಚನೆಗೆ ಬೆಡಗನ್ನಿತ್ತಿದೆ. ಒಂದೊಂದು ಸಾಲಿನಲ್ಲೂ ೨೦ ಮಾತ್ರೆಗಳಿರುತ್ತವೆ. ಹರಿದಾಸ ಸಾಹಿತ್ಯದಲ್ಲಿ ನಮಗೆ ಸಿಕ್ಕಿರುವ ದಂಡಕ ಇದೊಂದೇ.

ಧಾರ್ಮಿಕ ಕ್ಷೇತ್ರಗಳಿಗೆ ಹೋಗಿ ಬಂದಂತಹ ಶ್ರೀಪಾದರಾಜರು ಆಯಾ ಕ್ಷೇತ್ರಮೂರ್ತಿಗಳನ್ನು ಅನನ್ಯಭಕ್ತಿಯಿಂದ ಸ್ತುತಿ ಸಿದ್ದಾರೆ. ಶ್ರೀರಂಗದ ರಂಗನಾಥ ಶ್ರೀಪಾದರಾಜರಿಗೆ ಬಲು ಪ್ರಿಯನಾದವನು. ಈ ಹಿಂದೆ ಉದಾಹರಿಸಿರುವ 'ಕಂಗಳಿ ದ್ಯಾತಕೋ...' ಎಂಬ ಕೀರ್ತನೆಯಲ್ಲಿ ಶ್ರೀರಂಗಕ್ಷೇತ್ರದ ವಿವರ ವಾದ ವರ್ಣನೆಯನ್ನು ನೋಡಬಹುದು. ಅಲ್ಲಿಯ ಚಂದ್ರ ಪುಷ್ಕರಿಣಿ, ಪರವಾಸುದೇವನಮೂರ್ತಿ, ಗಂಗೆಗೆ ಸರಿಸಮಳಾದ ಕಾವೇರಿ, ಸ್ವಾಮಿಯ ರಥೋತ್ಸವ ಇವೆಲ್ಲವುಗಳ ವರ್ಣನೆ ಬಂದಿದೆ. ಆ 'ದಕ್ಷಿಣಾಧೀಶ'ನನ್ನು ಸರ್ವಲಕ್ಷಣ ಪರಿಪೂರ್ಣನೆಂದು ಮೆಚ್ಚಿ ಹೊಗಳಿದ್ದಾರೆ. ಅಲ್ಲಿಯ ದಿವ್ಯ ವಿಮಾನದಲ್ಲಿರುವ ಮೂರ್ತಿ ಯನ್ನು ಕಣ್ತುಂಬ ನೋಡಲು ಎಲ್ಲ ಭಕ್ತಪರಿವಾರವನ್ನೂ ಆಹ್ವಾನಿಸಿದ್ದಾರೆ. ('ರಂಗನಾಥನ ನೋಡುವ ಬನ್ನಿ') ಅಂತೆಯೇ

ಉಭಯ ಕಾವೇರೀ ತೀರನೇ ಆದ ಶ್ರೀರಂಗಪಟ್ಟಣದ ರಂಗನಾಥನೂ ಅವರಿಗೆ ಮೆಚ್ಚಿನ ದೈವವಾಗಿದ್ದಾನೆ. ಮನುಷ್ಯನಾದವನು ತನ್ನ ದೇಹವನ್ನು 'ರಂಗ ವಿಠಲನೆನಿಪ ಪಶ್ಚಿಮರಂಗ'ನಿಗೆ ಅರ್ಪಿಸದಿದ್ದರೆ ಅವನ ಮನುಷ್ಯಜನ್ಮವೇ ವ್ಯರ್ಥ, ಅವರ ದೃಷ್ಟಿಯಲ್ಲಿ. ಹೀಗೆಯೇ ತಿರುಪತಿಯ ತಿಮ್ಮಪ್ಪನನ್ನು ಕುರಿತ 'ಸ್ಮರಿಸಿದವರನು ಕಾಯ್ವ ನಮ್ಮ ಸೂರ್ಯಾನೇಕ ಪ್ರಭಾವ। ಸುರಮುನಿಗಳ ಸಂಜೀವ ಶ್ರೀವೆಂಕಟ ನಮ್ಮ ಪೊರೆವ' ಎಂಬ ಕೀರ್ತನೆಯೂ ಗಮನಾರ್ಹ. ಆ 'ವೆಂಕಟಶೈಲವಲ್ಲಭ'ನನ್ನು ಕುರಿತು 'ಘೋರ ದುರಿತಗಳ ದೂರ ಮಾಡಿಸೋ'—ಎಂದು ಬಿನ್ನವಿಸಿರುವರು. ಹರಿಯ ನರಸಿಂಹಾವತಾರ ಶ್ರೀಪಾದರಾಜರಿಗೆ ವಿಶೇಷವಾಗಿ ಕಂಡಿದೆ. ಬಂಕಾಪುರದ ನರಸಿಂಹನಲ್ಲಿ ತಮ್ಮ ದೈನ್ಯಾವಸ್ಥೆಯನ್ನೂ, ಚಪಲಚಿತ್ತವನ್ನೂ ತೋಡಿಕೊಂಡು 'ಕಷ್ಟಬಟ್ಟಮಗ'ನೆಂದು ತಮ್ಮ ಕಣ್ಣೊರೆಸಿ ಸಂತೈಸಬೇಕೆಂದು ಅಪೇಕ್ಷಿಸಿದ್ದಾರೆ. 'ದುರಿತ ಗಜ ಪಂಚಾನನ'ನೆಂದು ನರಸಿಂಹನನ್ನು ವಿಶೇಷಿಸಿದ್ದಾರೆ. ಅವರ ಲಕ್ಷ್ಮೀನೃಸಿಂಹ ಪ್ರಾದುರ್ಭಾವ ದಂಡಕ'ವಂತೂ ಹರಿಯು ನರಸಿಂಹಾವತಾರವೆತ್ತಿದ ವಿವರವೇ ಆಗಿದೆ. ಹೀಗೆ ಶ್ರೀರಂಗ, ತಿರುಪತಿ, ಬಂಕಾಪುರ ಹಾಗೂ 'ಉಡುಪಿನ ಉತ್ತುಂಗ ಕೃಷ್ಣನನ್ನು' ಯಶೋದೆ ತೂಗಿದಳೆಂದು ಹೇಳುವಲ್ಲಿ ಬರುವ ಉಡುಪಿ ಕ್ಷೇತ್ರದ ಪ್ರಸ್ತಾಪಗಳು ಶ್ರೀಪಾದರಾಜರ ಧಾರ್ಮಿಕ ಕ್ಷೇತ್ರ ಪರ್ಯಟನೆಯ ದಿಕ್ಸೂಚಿಗಳಾಗಿವೆ.

ಕಾವ್ಯಶೈಲಿ

ಶ್ರೀಪಾದರಾಜರ ಕಾವ್ಯ ಶೈಲಿಯನ್ನು ಕುರಿತು ಹೇಳುವುದಾದರೆ ಅವರ ದಂಡಕದಲ್ಲಿ ಲಲಿತರಗಳೆಯ ಲಯವನ್ನು ಕಾಣುತ್ತೇವೆ.

ಪುಂಖಾನು ಪುಂಖವಾಗಿ ಬರುವ ಸರಳವಾದ ಕನ್ನಡ ಮಾತುಗಳು ಅವರ ಕೃತಿಗಳಲ್ಲಿ ಕಂಡುಬರುವ ಸಾಮಾನ್ಯ ಲಕ್ಷಣ. ನುಡಿಕಟ್ಟಿ ನೋಪಾದಿಯಲ್ಲಿರುವ ಮಾತುಗಳು ಅವರ ಜೀವನಾನುಭವ ಸೂಚಕಗಳು. (ಉದಾ : ' ಅರಸು ಮುಟ್ಟಲು ದಾಸಿರಂಭೆ' ; ' ಪರುಷ ಮುಟ್ಟಲು ಲೋಹ ಸ್ವರ್ಣ ' ; ' ಸರಕು ಒಪ್ಪಿಸಿದ ಮೇಲೆ ಸುಂಕವುಂಟೆ ' ಇತ್ಯಾದಿ) ಸಂಭಾಷಣಾ ತಂತ್ರದಿಂದ ಕೆಲವು ಕೀರ್ತನೆಗಳಲ್ಲಿ ನಾಟಕೀಯತೆಯನ್ನು ಸಾಧಿಸಿದ್ದಾರೆ. (' ಭ್ರಮರಗೀತೆ ', ' ಕಂಜನೇತ್ರೇ ಶುಭ ಮಂಜುಳಗಾತ್ರೇ' ಎಂದು ಪ್ರಾರಂಭವಾಗುವ ರುಕ್ಮಿಣಿ-ಸತ್ಯಭಾಮೆಯರ ಸಂವಾದ ಇತ್ಯಾದಿ.) ಒಳಪ್ರಾಸದ ಬಳುಕು ಕೃತಿಗೆ ಬೆಡಗನ್ನು ತಂದಿದೆ. (' ತುಂಗ ವಿಹಂಗ ತುರಂಗ ದಯಾಪಾಂಗ ರಂಗವಿಠಲ ಭವಭಂಗ ಶುಭಾಂಗ ಉತ್ತುಂಗ ಗುಣಗಳಂತರಂಗನೆ ಅ। ಸಂಗನ ಪೆತ್ತ ರಂಗವಿಠಲನೆ ಇತ್ಯಾದಿ.) ಕೆಲವು ಪ್ರಸಂಗಗಳನ್ನು ಆರಿಸಿಕೊಂಡು ಅವುಗಳನ್ನು ಲಂಬಿಸಿ ಕೃತಿರಚನೆ ಮಾಡಿರುವುದು ಇವರ ವೈಶಿಷ್ಟ್ಯ ಗಳಲ್ಲೊಂದು. (ನರಸಿಂಹಾವತಾರದ ಪ್ರಸಂಗವನ್ನಾಧರಿಸಿದ ದಂಡಕ, ಕೃಷ್ಣ ಮಧುರೆಗೆ ಹೊರಡುವ ಪ್ರಸಂಗ ಇತ್ಯಾದಿ.)

ಭೂಮಿಯ ಚಿನ್ನದ ತೊಟ್ಟಿಲಮಾಡಿ
ಸೋಮ ಸೂರ್ಯರೆಂಬ ಕಲಶವ ಹೂಡಿ
ನೇಮದಿ ವೇದಗಳ ಸರಪಣಿ ಮಾಡಿ
ಆ ಮಹಾಕಾಶಕ್ಕೆ ಕೊಂಡಿಗಳ ಹಾಕಿ

—ಇದು ರಂಗಧಾಮನನ್ನು ಮಲಗಿಸಿ ತೂಗಿದಂತಹ ತೊಟ್ಟಿಲಿನ ರಚನೆ. ಈ ಬೃಹತ್ ಕಲ್ಪನೆ ಶ್ರೀಪಾದರಾಜರಂತಹ ಭಕ್ತ ಶ್ರೇಷ್ಠರಿಗೆ ಮಾತ್ರ ಸಾಧ್ಯ. ಅಂತೆಯೇ ' ಭವವೆಂಬಟವಿಯಲಿ

ಭಯಕೊಳದಲಿ ಸಿಕ್ಕಿ ತಾಪತ್ರಯವೆಂಬ ದಾವಾನಲ ತಪ್ತನರ'ರ ಪ್ರಸ್ತಾಪಮಾಡುತ್ತಾರೆ. ಗೋಪಿಯರ ವಿರಹಾಬ್ಧಿಯನ್ನು ದಾಟಿಸುವೆನೆಂದ ಕೃಷ್ಣ ಅವರನ್ನು ತನ್ನ ನೇಹವೆಂಬೋ ನಾವೆಯ ನ್ನೇರಿಸಿದನಂತೆ.—ಇಂತಹ ರೂಪಕಾಲಂಕಾರಗಳು ಶ್ರೀಪಾದ ರಾಜರ ಕೃತಿಗಳಲ್ಲಿ ವಿಪುಲವಾಗಿವೆ. 'ಒಂಟಿಯಂತೆ ಗೋಣ ಮೇಲೆತ್ತುವರು' 'ಶುದ್ಧಧವಳದಂತೆ ಮಂದಹಾಸ' 'ಚಂದ್ರನಂ ತೊಪ್ಪುವ ಸಿರಿಮಂದರೋದ್ಧರನಂಘ್ರಿಯು' — ಇತ್ಯಾದಿ ಉಪಮಾಲಂಕಾರಗಳಿಗೂ ಕೊರತೆಯಿಲ್ಲ. ಆದಿಪ್ರಾಸ, ವಡಿಗಳು ಸಾಮಾನ್ಯವಾಗಿ ಎಲ್ಲ ರಚನೆಗಳಲ್ಲೂ ಹಾಸುಹೊಕ್ಕಾಗಿವೆ. ಲಯದ ದೃಷ್ಟಿಯಿಂದ ಹೇಳುವುದಾದರೆ ಶ್ರೀಪಾದರಾಜರ ರಚನೆ ಗಳು ಅಂಶಲಯದತ್ತ ಹೆಚ್ಚು ವಾಲಿದರೂ ಮಾತ್ರಾಲಯ ಗಳನ್ನೂ ಅಲ್ಲಲ್ಲಿ ಗುರುತಿಸಬಹುದು. ಆದರೆ ದಾಸರ ರಚನೆಗಳು ಮೂಲಭೂತವಾಗಿ ರಾಗ ತಾಳಗಳಿಗೆ ಬದ್ಧವಾಗಿ ಸಂಗೀತದ ಲಯವನ್ನೊಳಗೊಂಡಿರುವುದರಿಂದ ಅವುಗಳಲ್ಲಿ ಖಚಿತವಾಗಿ ಅಂಶ ಲಯವನ್ನು ಗುರುತಿಸುವುದೂ ಸಾಧ್ಯವಿಲ್ಲ; ಮಾತ್ರಾಲಯದ ಕಟ್ಟಿಗೂ ಅವು ಒಳಪಡುವುದಿಲ್ಲ.

ಉಪಸಂಹಾರ

ನಮಗೆ ತಿಳಿದಂತೆ ಕನ್ನಡದ 'ಕೀರ್ತನೆ' ಪ್ರಕಾರಕ್ಕೆ ಶ್ರೀಪಾದರಾಜರೇ ಮೊದಲಿಗರು. ಆಂಧ್ರದ ತಾಳ್ಳಪಾಕ ಅಣ್ಣಮಾಚಾರ್ಯರು ಕ್ರಿ. ಶ. ೧೫ನೆಯ ಶತಮಾನದಲ್ಲಿ ತಮ್ಮ ಪಲ್ಲವಿ, ಅನುಪಲ್ಲವಿ, ಚರಣಗಳಿಂದ ಕೂಡಿದ ರಚನೆಗಳನ್ನು ಮೊತ್ತಮೊದಲಿಗೆ 'ಸಂಕೀರ್ತನೆ'ಗಳೆಂದು ಕರೆದು ಅದಕ್ಕೆ ಲಕ್ಷಣ ವನ್ನು ಹೇಳಿರುವರು. ಶ್ರೀಪಾದರಾಜರೂ ಅದೇ ಕಾಲದಲ್ಲಿ

ಕರ್ನಾಟಕದಲ್ಲಿ ಕೀರ್ತನೆಗಳನ್ನು ರಚಿಸಿದರು. ಸು. ೧೨ನೆಯ ಶತಮಾನದಲ್ಲಿ ಶಿವಶರಣರು ಈ ರೀತಿಯ ' ಹಾಡು 'ಗಳನ್ನು ರಚಿಸಿದರೂ ಅವುಗಳನ್ನು ಕೀರ್ತನೆಗಳೆಂದು ನಿರ್ದೇಶಿಸಿಲ್ಲ; ಅವು ಗಳಲ್ಲಿ ಅನುಸಲ್ಲವಿ ಕಂಡುಬರುವುದಿಲ್ಲವೆಂಬುದು ಗಮನಾರ್ಹ. ಅವರು ಮುಖ್ಯವಾಗಿ ವಚನಕಾರರು. ಸಂಗೀತದ ತಳಹದಿಯ ಮೇಲೆ ಉಗಾಭೋಗ, ಸುಳಾದಿ, ಕೀರ್ತನೆ, ವೃತ್ತನಾಮ, ಭ್ರಮರ ಗೀತಾದಿಗಳ ರಚನೆಯಲ್ಲಿ ಪ್ರಪ್ರಥಮರಾಗಿ ನಿಂತು, ಕನ್ನಡ ಹರಿದಾಸ ಪರಂಪರೆಗೆ ಒಂದು ಭದ್ರವಾದ ಬುನಾದಿಯನ್ನು ಹಾಕಿ ಕೊಟ್ಟವರು ಶ್ರೀಪಾದರಾಜರು. ಕನ್ನಡ ಭಾಷೆಯು ಬಳಕೆಯೇ ವೈಲಿಗೆ ಎನ್ನುವಂತಹ ಮಠದ ಪರಿಸರದಲ್ಲಿ ಮಧ್ವಮತತತ್ತ್ವ ಗಳನ್ನು ಕನ್ನಡದಲ್ಲಿ ಬೋಧಿಸಿ ಜನಜಾಗೃತಿಯನ್ನುಂಟು ಮಾಡಿದ ಕೀರ್ತಿ ಶ್ರೀಪಾದರಾಜರದು. ಕನ್ನಡ ಭಾಷೆ, ಸಾಹಿತ್ಯವನ್ನು ಪುರಸ್ಕರಿಸಿದವರು ಹಾಗೂ ವ್ಯಾಸರಾಯರಂತಹ ಶಿಷ್ಯರನ್ನು ನಾಡಿಗೆ ಕೊಟ್ಟ ಮಹನೀಯರು ಅವರು. ತಾತ್ವಿಕವಾಗಿ, ಸಾಹಿತ್ಯಿಕ ವಾಗಿ, ಸಂಗೀತದ ಹಿನ್ನೆಲೆಯಲ್ಲಿ ಹರಿದಾಸ ಪರಂಪರೆಯನ್ನು ಬೆಳೆಸಿದವರು ಮಠಾಧಿಪತ್ಯದ ಸೀಮಿತ ಪರಿಸರದಲ್ಲಿ ಅವರು ಮಾಡಿದ ಈ ಸಾಧನೆ ಹಿರಿದು. ವಸ್ತು, ರಚನಾವೈವಿಧ್ಯ, ಭಾಷೆ, ಧೋರಣೆ, ನಿರೂಪಣೆ—ಎಲ್ಲ ವಿಷಯಗಳಲ್ಲೂ ಶ್ರೀಪಾದರಾಜರ ಪ್ರಭಾವ ಇಡೀ ಹರಿದಾಸ ಪರಂಪರೆಯ ಮೇಲಾಗಿದೆ. ಧ್ರುವನ ಅಂಶರೆಂದು ಪರಿಚಿತರಾಗಿರುವ ಇವರು ಇಂದಿಗೂ ಈ ಎಲ್ಲ ದೃಷ್ಟಿ ಗಳಿಂದಲೂ ಹರಿದಾಸ ಸಾಹಿತ್ಯದ ಧ್ರುವತಾರೆಯಾಗಿರುವರು.*

---

* ಈ ಪುಸ್ತಕದಲ್ಲಿ ಉದಾಹರಿಸಿರುವ ಎಲ್ಲ ಕೀರ್ತನೆಗಳನ್ನೂ ಕನ್ನಡ ಅಧ್ಯಯನ ಸಂಸ್ಥೆ ಪ್ರಕಟಿಸಿರುವ ' ಶ್ರೀಪಾದರಾಜರ ಕೃತಿಗಳು ' ಎಂಬ ಪುಸ್ತಕದಿಂದ (ಸಂ: ಡಾ. ಜಿ. ವರದರಾಜರಾವ್) ಆರಿಸಿಕೊಂಡಿದೆ.

ಕೆ.ಸಂ. ೨೭೪೫—ಎಂ.ಯು.ಪಿ.ಎಂ.—೫,೦೦೦ ಪ್ರತಿಗಳು—೧೦-೬-೧೯೭೭

ಕೆಲವು ಸಾಹಿತ್ಯ ಕೃತಿಗಳು

೧. ಕುಮಾರವ್ಯಾಸ—ಎಸ್. ವಿ. ರಂಗಣ್ಣ
೨. ಹಂಪೆಯ ಹರಿಹರ—ಡಿ. ಎಲ್. ನರಸಿಂಹಾಚಾರ್
೩. ಕನ್ನಡ ಸಾಹಿತ್ಯ—ಕೆ. ವೆಂಕಟರಾಮಪ್ಪ
೪. ಪಂಪ—ತೀ. ನಂ. ಶ್ರೀಕಂಠಯ್ಯ
೫. ಕರ್ಣಾಟಕ ಕಾದಂಬರಿ—ವಿ. ಸೀತಾರಾಮಯ್ಯ
೬. ಕಾಳಿದಾಸನ ಕಾವ್ಯಗಳು—ಎಸ್. ರಾಮಚಂದ್ರರಾವ್
೭. ಭಾಸ—ಡಾ. ಎಚ್. ಎಲ್. ಹರಿಯಪ್ಪ
೮. ಸರ್ವಜ್ಞಕವಿ—ಎ. ಆರ್. ಕೃಷ್ಣಶಾಸ್ತ್ರೀ
೯. ಇಂಗ್ಲಿಷ್ ಪ್ರಬಂಧಗಳು—ಎಸ್. ಮಂಜುನಾಥ್
೧೦. ಅಕ್ಕಮಹಾದೇವಿ—ಎಸ್. ವಿ. ಪರಮೇಶ್ವರಭಟ್ಟ
೧೧. ಕುಮಾರವ್ಯಾಸ ವಾಣಿ—ಎಸ್. ವಿ. ರಂಗಣ್ಣ
೧೨. ನಯಸೇನ—ಜಿ. ವೆಂಕಟಸುಬ್ಬಯ್ಯ
೧೩. ತೆಲುಗು ಚಾಟುಪದ್ಯಗಳು—ಕೆ. ವೆಂಕಟರಾಮಪ್ಪ
೧೪. ಲಕ್ಷ್ಮೀಶ—ಎನ್. ಅನಂತರಂಗಾಚಾರ್
೧೫. ಮುದ್ದಣ—ತ. ಸು. ಶಾಮರಾವ್
೧೬. ಜನಪದ ಮುಕ್ತಕಗಳು—ಎಚ್. ಎಂ. ಶಂಕರನಾರಾಯಣರಾವ್
೧೭. ಭಾವಗೀತೆ—ಎಸ್. ವಿ. ಪರಮೇಶ್ವರಭಟ್ಟ
೧೮. ಮಹಾಭಾರತ—ಡಾ. ಕೆ. ಕೃಷ್ಣಮೂರ್ತಿ
೧೯. ನೇಮಿಚಂದ್ರ—ಎನ್. ಅನಂತರಂಗಾಚಾರ್
೨೦. ಶ್ರೀನಾಥ—ಕೆ. ವೆಂಕಟರಾಮಪ್ಪ
೨೧. ಷಡಕ್ಷರದೇವ—ದೇ. ಜವರೇಗೌಡ
೨೨. ಚಿತ್ರಾಂಗದಾ—ಉ. ಕಾ. ಸುಬ್ಬರಾಯಾಚಾರ್
೨೩. ಸಂಚಿಯ ಹೊನ್ನಮ್ಮ—ಎಚ್. ಎಂ. ಶಂಕರನಾರಾಯಣರಾವ್
೨೪. ವಾಲ್ಮೀಕಿ ರಾಮಾಯಣ—ಉ. ಕಾ. ಸುಬ್ಬರಾಯಾಚಾರ್
೨೫. ಮಹಾಕವಿ ಬಾಣ—ಟಿ. ಎಸ್. ಕೃಷ್ಣಮೂರ್ತಿ
೨೬. ತುಳಸೀದಾಸ—ಡಾ. ಹಿರಣ್ಮಯ
೨೭. ವೇಮನ—ಕೆ. ವೆಂಕಟರಾಮಪ್ಪ
೨೮. ಕನ್ನಡದಲ್ಲಿ ಅನುಭಾವ ಸಾಹಿತ್ಯ—ಡಾ. ಎಚ್. ತಿಪ್ಪೇರುದ್ರಸ್ವಾಮಿ

೨೯. ಅಲ್ಲಮಪ್ರಭು—ಡಾ. ಟಿ. ಜಿ. ಸಿದ್ಧಪ್ಪಾರಾಧ್ಯ

೩೦. ಕಾಳಿದಾಸನ ನಾಟಕಗಳು—ಡಾ. ಕೆ. ಕೃಷ್ಣಮೂರ್ತಿ

೩೧. ಅಣ್ಣನ ಆದರ್ಶ—ಡಾ. ಟಿ. ಜಿ. ಸಿದ್ಧಪ್ಪಾರಾಧ್ಯ

೩೨. ಹೊಸಗನ್ನಡ ಭಾವಗೀತೆಗಳಲ್ಲಿ ಜೀವನ ವಿಕಾಸ—ದೇವಂಗಿ ಟಿ. ಚಂದ್ರಶೇಖರ

೩೩. ಸೂರದಾಸ—ಎಂ. ಎಸ್. ಕೃಷ್ಣಮೂರ್ತಿ

೩೪. ಜನ್ನ—ಡಾ. ಸಿ. ಪಿ. ಕೃಷ್ಣಕುಮಾರ್

೩೫. ರತ್ನಾಕರ ಮಹಾಕವಿ—ಜಿ. ಬ್ರಹ್ಮಪ್ಪ

೩೬. ಮಾಘಕವಿ—ವಿದ್ವಾನ್ ಎಂ. ಜಿ. ನಂಜುಂಡಾರಾಧ್ಯ

೩೭. ನಿಜಗುಣಶಿವಯೋಗಿ—ಎಚ್. ಗಂಗಾಧರನ್

೩೮. ಮುದ್ರಾರಾಕ್ಷಸ—ಡಾ. ಎನ್. ಎಸ್. ಅನಂತರಂಗಾಚಾರ್

೩೯. ರಾಘವಾಂಕ—ರಾಮೇಗೌಡ

೪೦. ಮೂರನೆಯ ಮಂಗರಸ ಕವಿ—ಹಂಪ ನಾಗರಾಜಯ್ಯ

೪೧. ನಾಗಚಂದ್ರ—ಡಾ. ಸಿ. ಪಿ. ಕೃಷ್ಣಕುಮಾರ್

೪೨. ವಡ್ಡಾರಾಧನೆ—ಹಂಪ ನಾಗರಾಜಯ್ಯ

೪೩. ಮಹಾಕವಿ ಭಾರವಿ—ವಿದ್ವಾನ್ ಎಂ. ಜಿ. ನಂಜುಂಡಾರಾಧ್ಯ

೪೪. ಕವಿ ಮುರಾರಿ—ವಿದ್ವಾನ್ ಎಂ. ಜಿ. ನಂಜುಂಡಾರಾಧ್ಯ

೪೫. ಚನ್ನಬಸವಣ್ಣ—ಓ. ಎನ್. ಲಿಂಗಣ್ಣಯ್ಯ

೪೬. ಕವಿ ಶ್ರೀ ಹರ್ಷ—ವಿದ್ವಾನ್ ಎಂ. ಜಿ. ನಂಜುಂಡಾರಾಧ್ಯ

೪೭. ಕಬೀರದಾಸ—ಡಾ. ಹಿರಣ್ಮಯ

೪೮. ವಿದ್ಯಾಪತಿ—ಎಂ. ಎಸ್. ಕೃಷ್ಣಮೂರ್ತಿ

೪೯. ಕವಿ ಭಟ್ಟನಾರಾಯಣ—ವಿದ್ವಾನ್ ಎಂ. ಜಿ. ನಂಜುಂಡಾರಾಧ್ಯ

೫೦. ಕಾವ್ಯದಲ್ಲಿ ಧ್ವನಿ—ಗುರುಪಾದ ಕೆ. ಹೆಗಡೆ

೫೧. ಪೊನ್ನ—ಎನ್. ಅನಂತರಂಗಾಚಾರ್

೫೨. ಎಡೆಯೂರು ತೋಂಟದ ಸಿದ್ಧಲಿಂಗಯತಿ—ಓ. ಎನ್. ಲಿಂಗಣ್ಣಯ್ಯ

೫೩. ದೇವರ ದಾಸಿಮಯ್ಯ—ಕೆ. ಅನಂತರಾಮು

೫೪. ಸಂಸ್ಕೃತ ಸಾಹಿತ್ಯ—ಡಾ. ಆರ್. ಎಸ್. ಶಿವಗಣೇಶಮೂರ್ತಿ

೫೫. ಚಾಮುಂಡರಾಯ—ಡಾ. ಟಿ. ವಿ. ವೆಂಕಟಾಚಲಶಾಸ್ತ್ರೀ

೫೬. ಶ್ರೀ ಸಮರ್ಥ ರಾಮದಾಸರು—ಬಿ. ಪಿ. ಚಂದ್ರಾಬಾಯಿ

೫೭. ಉಪಭಾಷಾ ಅಧ್ಯಯನ—ಶಾಲಿನಿ ರಘುನಾಥ

೫೮. ಭಾರತೀಯ ಮಹಿಳಾ ಪರಂಪರೆ—ಬಿ. ಪಿ. ಚಂದ್ರಾಬಾಯಿ

೫೯. ಬಂಧುವರ್ಮ—ಬಿ. ಎಸ್. ಸಣ್ಣಯ್ಯ

೬೦. ಶ್ರೀರಾಮಾಯಣದರ್ಶನಂ—ಒಂದು ಸಮೀಕ್ಷೆ—ಡಾ. ಸಿ.ಪಿ. ಕೃಷ್ಣಕುಮಾರ್